# ಸಾಧನಾ ಅಕಾಡೆಮಿ

## INFOGRAPHICS

# ಪಾಕ್ಷಿಕ ಪ್ರಚಲಿತ ಘಟನೆಗಳು

# ಡಿಸೆಂಬರ್-2021















SADHANA ACADEMY










» Download Sadhana App

» Free Test Series

» Free Current Affairs

» Free Videos

» You Can Buy Books

» 400+ Competetive Books Available



» ಐ ಫೋನ್ ಮತ್ತು ಲ್ಯಾಪ್‌ಟಾಪ್/ಡೆಸ್ಕ್‌ಟಾಪ್ ಬಳಕೆದಾರರು
www.sadhanamart.com ನಲ್ಲಿ
ಈ ಸೌಲಭ್ಯ ಪಡೆಯಬಹುದು

ಕೃಪೆ: ಕನ್ನಡ ಮತ್ತು ಇಂಗ್ಲಿಷ್ ದಿನ ಪತ್ರಿಕೆಗಳು

## ಇಡಬ್ಲ್ಯೂಎಸ್ ಆದಾಯ ಮಿತಿ: ತ್ರಿಸದಸ್ಯ ಸಮಿತಿ

ಶಿಕ್ಷಣ ಮತ್ತು ಉದ್ಯೋಗ ದಲ್ಲಿ ಮೀಸಲಾತಿ ಪಡೆಯಲು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ (ಇ.ಡಬ್ಲ್ಯೂ.ಎಸ್) ನಿಗದಿಪಡಿಸಿರುವ ವಾರ್ಷಿಕ ₹ 8 ಲಕ್ಷ ಆದಾಯ ಮಿತಿಯನ್ನು ಪರಿಷ್ಕರಿಸಲು ಮೂವರು ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿದೆ.

## ಟೆಕ್ ಕಂಪನಿಗಳ ಸಾರಥ್ಯ ಭಾರತೀಯ ಸಿ.ಇ.ಒ ಗಳ ಪಾರಮ್ಯ

**ಪರಾಗ್ ಅಗರ್‌ವಾಲ್ (ಟ್ವಿಟರ್)**



ಟ್ವಿಟರ್‌ನ ನೂತನ ಸಿಇಒ ಆಗಿ ನೇಮಕವಾಗಿರುವ ಪರಾಗ್ ಅಗರ್‌ವಾಲ್ (37) ಅವರು ಮೂಲತಃ ಮುಂಬೈನವರು. ಬಾಂಬೆ ಐಐಟಿಯಿಂದ ಎಂಜಿನಿಯರಿಂಗ್ ಪದವಿ ಪಡೆದ ಪರಾಗ್ ಅವರು, ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಟ್ವಿಟರ್ ಸೇರುವ ಮುನ್ನ ಪರಾಗ್ ಅವರು, 2006ರಿಂದ 2010ರ ನಡುವೆ ಮೈಕ್ರೊಸಾಫ್ಟ್ ರಿಸರ್ಚ್ ಮತ್ತು ಯಾಹೂ ರಿಸರ್ಚ್‌ನಲ್ಲಿ ರಿಸರ್ಚ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿದ್ದರು. 2011ರಲ್ಲಿ ಟ್ವಿಟರ್‌ನಲ್ಲಿ ರೆವೆನ್ಯೂ ಅಂಡ್ ಕನ್ಸ್ಯೂಮರ್ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಆರಂಭಿಸಿದರು. ಆನಂತರ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ (ಸಿಟಿಒ) ಆಗಿ ಬಡ್ತಿ ಪಡೆದರು. 'ಸಿಟಿಒ ಆಗಿ ಪರಾಗ್ ಅವರು ಸಲ್ಲಿಸಿರುವ ಸೇವೆಯನ್ನು ಮತ್ತು ಕಂಪನಿಗೆ ಅವರು ಕೊಟ್ಟಿರುವ ಕೊಡುಗೆಯನ್ನು ಪರಿಗಣಿಸಿಯೇ ಈ ಹುದ್ದೆ ನೀಡಲಾಗಿದೆ. ಈಗ ಪರಾಗ್ ಅವರ ನಾಯಕತ್ವದ ಸಮಯ' ಎಂದು ಟ್ವಿಟರ್‌ನ ನಿರ್ಗಮಿತ ಸಿಇಒ ಜಾಕ್ ಡೋರ್ಸಿ ತಿಳಿಸಿದರು.

**ಸತ್ಯ ನಾದೆಲ್ಲಾ (ಮೈಕ್ರೊಸಾಫ್ಟ್)**



ಕಂಪ್ಯೂಟರ್ ಕಾರ್ಯನಿರ್ವಹಣಾ ವ್ಯವಸ್ಥೆ ತಯಾರಕ ಸಂಸ್ಥೆ, ಮೈಕ್ರೊಸಾಫ್ಟ್‌ನ ಸಿಇಒ ಆಗಿರುವ ಸತ್ಯ ನಾದೆಲ್ಲಾ ಅವರು ಭಾರತೀಯ. ಹೈದರಾಬಾದ್‌ನಲ್ಲಿ 1967ರ ಆಗಸ್ಟ್ 19ರಂದು ಜನಿಸಿದ ನಾದೆಲ್ಲಾ ಅವರು ಎಂಜಿನಿಯರಿಂಗ್ ಪದವಿ ಪಡೆದದ್ದು ಕರ್ನಾಟಕದಲ್ಲಿ. ರಾಜ್ಯದ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸತ್ಯ ನಾದೆಲ್ಲಾ ಅವರು ತಮ್ಮ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿಯನ್ನು 1988ರಲ್ಲಿ ಪೂರ್ಣಗೊಳಿಸಿದರು. ನಂತರ ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1990ರಲ್ಲಿ ಸನ್ ಮೈಕ್ರೊಸಿಸ್ಟಂ ಎಂಬ ಕಂಪನಿಯಲ್ಲಿ ಉದ್ಯೋಗ ಆರಂಭಿಸಿದ ನಾದೆಲ್ಲಾ ಅವರು, 1992ರಲ್ಲಿ ಮೈಕ್ರೊಸಾಫ್ಟ್ ಕಂಪನಿಯಲ್ಲಿ ಎಂಜಿನಿಯರ್ ಹುದ್ದೆಗೆ ಸೇರಿದ್ದರು. ಅಂದಿನಿಂದ ಅದೇ ಕಂಪನಿಯಲ್ಲಿ ಉಳಿದ ಅವರು, 2014ರಲ್ಲಿ ಕಂಪನಿಯ ಸಿಇಒ ಹುದ್ದೆಗೆ ಬಡ್ತಿ ಪಡೆದರು.

**ಸುಂದರ್ ಪಿಚೈ (ಆಲ್ಫಾಬೆಟ್ ಮತ್ತು ಗೂಗಲ್)**



ಸುಂದರ್ ಪಿಚೈ ಎಂದೇ ಖ್ಯಾತರಾಗಿರುವ ಪಿಚೈ ಸುಂದರರಾಜನ್ ಅವರು ತಮಿಳುನಾಡಿನ ಚೆನ್ನೈನವರು. ತಮ್ಮ ಶಾಲಾ ದಿನಗಳನ್ನು ಅಲ್ಲಿಯೇ ಕಳೆದ ಪಿಚೈ, ಖರಗ್‌ಪುರ ಐಐಟಿಯಿಂದ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಅಂಡ್ ಮೆಟೀರಿಯಲ್ ಸೈನ್ಸ್ ವಿಷಯದಲ್ಲಿ ಎಂಎಸ್ ಪದವಿ ಪಡೆದಿದ್ದಾರೆ. ಎಂಬಿಎ ಪದವಿಯನ್ನೂ ಹೊಂದಿರುವ ಅವರು, ಹಲವು ಕಂಪನಿಗಳನ್ನು ಮುನ್ನಡೆಸಿದ್ದಾರೆ. 2015ರಲ್ಲಿ ಗೂಗಲ್ ಇಂಕ್‌ನ ಸಿಇಒ ಆಗಿ ನೇಮಕವಾದರು. ಗೂಗಲ್‌ನ ಮಾತೃಸಂಸ್ಥೆ ಆಲ್ಫಾಬೆಟ್ ಇಂಕ್‌ನ ಸಿಇಒ ಆಗಿ 2019ರಲ್ಲಿ ಅಧಿಕಾರ ಸ್ವೀಕರಿಸಿದರು. ಈಗ ಎರಡೂ ಕಂಪನಿಗಳನ್ನು ಮುನ್ನಡೆಸುತ್ತಿದ್ದಾರೆ.

**ಜಯಶ್ರೀ ಉಲ್ಲಾಳ್ (ಅರಿಸ್ಟಾ ನೆಟ್‌ವರ್ಕ್ಸ್)**



ಅಮೆರಿಕದ ಕೋಟ್ಯಾಧೀಶೆ ಉದ್ಯಮಿ ಜಯಶ್ರೀ ಉಲ್ಲಾಳ್ (60) ಅವರು ಕ್ಲೌಡ್ ನೆಟ್‌ವರ್ಕ್ ಕಂಪನಿ 'ಅರಿಸ್ಟಾ'ದ ಸಿಇಒ ಆಗಿದ್ದಾರೆ. ಲಂಡನ್‌ನಲ್ಲಿ ಹುಟ್ಟಿದ ಇವರು ದೆಹಲಿಯಲ್ಲಿ ಆರಂಭಿಕ ಶಿಕ್ಷಣ ಪಡೆದರು. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. ಎಎಂಡಿಯಲ್ಲಿ ಎಂಜಿನಿಯರ್ ಆಗಿ ವೃತ್ತಿ ಆರಂಭಿಸಿದ ಇವರು, ಅಲ್ಲಿ ಮಹತ್ವದ ಹುದ್ದೆ ನಿಭಾಯಿಸಿದರು. ಫೇರ್‌ಚೈಲ್ಡ್ ಸೆಮಿಕಂಡಕ್ಟರ್ ಕಂಪನಿಯಲ್ಲೂ ಕೆಲಸ ಮಾಡಿದರು. 2008ರಲ್ಲಿ ಅರಿಸ್ಟಾ ಸಂಸ್ಥೆಯ ಸಿಇಒ ಹಾಗೂ ಮುಖ್ಯಸ್ಥರಾಗಿ ನೇಮಕಗೊಂಡರು. 2018ರ ವಿಶ್ವದ ಅತ್ಯುತ್ತಮ ಸಿಇಒ ಪ್ರಶಸ್ತಿ ಪಡೆದ ಅವರು, 2019ರ ಫಾರ್ಚೂನ್ ಅಗ್ರ 20 ಉದ್ಯಮಿಗಳಲ್ಲಿ ಒಬ್ಬರೆನಿಸಿದ್ದರು.

**ರಘು ರಘುರಾಂ (ವಿಎಂವೇರ್)**

ಭಾರತದವರಾದ ರಘು ರಘುರಾಂ ಅವರ ಪೂರ್ಣ ಹೆಸರು ರಂಗರಾಜನ್ ರಘು ರಘುರಾಂ. ಬಾಂಬೆ ಐಐಟಿಯಿಂದ ಎಲೆಕ್ಟ್ರಿಕಲ್ ಎಂಜಿನಿಯರ್‌ನಲ್ಲಿ ಪದವಿ ಪಡೆದಿರುವ ರಘು ಅವರು ತಮ್ಮ ಉದ್ಯೋಗವನ್ನು ನೆಟ್‌ಸ್ಕೇಪ್ ಕಂಪನಿಯಲ್ಲಿ ಆರಂಭಿಸಿದ್ದರು.



2003ರಲ್ಲಿ ಆಗಷ್ಟೇ ಸ್ಟಾರ್ಟ್‌ಅಪ್ ಆಗಿದ್ದ ವಿಎಂವೇರ್ ಕಂಪನಿಯಲ್ಲಿ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಆರಂಭಿಸಿದರು. ವಿಶ್ವದ ಅತ್ಯಂತ ದೊಡ್ಡ ಕ್ಲೌಡ್ ಕಂಪ್ಯೂಟಿಂಗ್ ಸೇವಾ ಕಂಪನಿಗಳಲ್ಲಿ ವಿಎಂವೇರ್ ಸಹ ಒಂದು ಎನಿಸಿಕೊಳ್ಳುವಲ್ಲಿ ರಘು ಅವರ ಕೊಡುಗೆ ಅಪಾರವಿದೆ ಎಂದು ಕಂಪನಿ ಹೇಳಿಕೊಂಡಿದೆ. 2021ರ ಜೂನ್‌ನಲ್ಲಿ ಅವರು ಕಂಪನಿಯ ಸಿಇಒ ಮತ್ತು ನಿರ್ದೇಶಕನ ಹುದ್ದೆಗೆ ಬಡ್ತಿ ಪಡೆದರು.


**ಅರವಿಂದ್ ಕೃಷ್ಣ (ಐಬಿಎಂ)**

ಐಐಟಿ ಕಾನ್ಪುರದ ಪದವೀಧರ ಅರವಿಂದ್ ಕೃಷ್ಣ (59) ಅವರಿಗೆ ಅಮೆರಿಕದ ಪ್ರಸಿದ್ಧ ಐಟಿ ಕಂಪನಿ 'ಐಬಿಎಂ'



ಜೊತೆ ಎರಡು ದಶಕಗಳ ಒಡನಾಟವಿದೆ. 1990ರಲ್ಲಿ ಇವರು ಸಂಸ್ಥೆಯನ್ನು ಸೇರಿದ್ದರು. ಇಲಿನಾಯ್ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ ಪಡೆದಿದ್ದಾರೆ. 2020ರ ಏಪ್ರಿಲ್‌ನಲ್ಲಿ ಐಬಿಎಂ ಸಿಇಒ ಆಗಿ ನೇಮಕವಾದ ಅವರು, 2021ರ ಜನವರಿಯಿಂದ ಕಂಪನಿಯ ಮುಖ್ಯಸ್ಥರ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ. ಇವರಿಗೂ ಮುನ್ನ ಸಿಇಒ ಹುದ್ದೆಯಲ್ಲಿದ್ದ ವರ್ಜಿನಿಯಾ ರೊಮೆಟ್ಟಿ ಅವರು, ಮುಂದಿನ ತಲೆಮಾರಿನ ಐಬಿಎಂ ನಿರ್ವಹಿಸಲು ಕೃಷ್ಣ ಸಮರ್ಥರು ಎಂದು ಶ್ಲಾಘಿಸಿದ್ದರು.

**ಅಜಯ್‌ಪಾಲ್ ಬಂಗಾ (ಮಾಸ್ಟರ್‌ಕಾರ್ಡ್)**



1990ರಲ್ಲಿ 'ಮಾಸ್ಟರ್‌ಕಾರ್ಡ್'ನ ಪ್ರವರ್ತಕರಾಗಿದ್ದ ಅಜಯ್‌ಪಾಲ್ ಸಿಂಗ್ ಬಂಗಾ (62) ಅವರು 2020ರ ಡಿಸೆಂಬರ್‌ವರೆಗೂ ಸಂಸ್ಥೆಯ ಸಿಇಒ ಆಗಿದ್ದರು. ಈಗ ಅವರು ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದಾರೆ. ಅಮೆರಿಕ–ಭಾರತ ಉದ್ಯಮ ಮಂಡಳಿ ಮುಖ್ಯಸ್ಥರಾಗಿಯೂ ಕೆಲಸ ಮಾಡಿದ್ದಾರೆ. ಪಂಜಾಬ್‌ನ ಜಲಂಧರ್ ಮೂಲದ ಕುಟುಂಬಕ್ಕೆ ಸೇರಿದ ಬಂಗಾ ಅವರು, ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದರು. ಇಲ್ಲಿ ಅವರ ತಂದೆ ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದರು. ಹೈದರಾಬಾದ್‌ನ ಬೇಗಂಪೇಟೆ ಪಬ್ಲಿಕ್ ಸ್ಕೂಲ್‌ನಲ್ಲಿ ಅಧ್ಯಯನ ಮಾಡಿದ ಬಂಗಾ, ದೆಹಲಿ ವಿಶ್ವವಿದ್ಯಾಲಯದ ಸೇಂಟ್ ಸ್ಟೀಫನ್ಸ್ ಕಾಲೇಜ್‌ನಿಂದ ಪದವಿ ಪಡೆದರು. ನಂತರ ಅಹಮದಾಬಾದ್‌ನ ಐಐಎಂನಿಂದ ಎಂಬಿಎ ಪದವಿಯನ್ನೂ ಪಡೆದರು.

**ನಿಖೇಶ್ ಅರೋರಾ (ಪಾಲೊ ಆಲ್ಟೊ ನೆಟ್‌ವರ್ಕ್ಸ್)**



ಗೂಗಲ್ ಹಾಗೂ ಸಾಫ್ಟ್‌ಬ್ಯಾಂಕ್‌ನ ಅಧ್ಯಕ್ಷರಾಗಿ 2016ರವರೆಗೂ ಕೆಲಸ ಮಾಡಿದ್ದ ನಿಖೇಶ್ ಅರೋರಾ (53) ಅವರು 2018ರ ಜೂನ್ 1ರಿಂದ 'ಪಾಲೊ ಆಲ್ಟೊ ನೆಟ್‌ವರ್ಕ್ಸ್'ನ ಸಿಇಒ ಆಗಿ ಕೆಲಸ ಮಾಡುತ್ತಿದ್ದಾರೆ. ಅರೋರಾ ಅವರು ಸಾಫ್ಟ್‌ಬ್ಯಾಂಕ್ ಮುಖ್ಯಸ್ಥರಾಗಿದ್ದಾಗ, ವಿಶ್ವದ ಅತಿ ಹೆಚ್ಚು ಸಂಭಾವನೆ ಪಡೆದ ಸಿಇಒ ಎಂಬ ದಾಖಲೆ ಬರೆದಿದ್ದರು. ವಾಯುಪಡೆ ಅಧಿಕಾರಿಯ ಮಗನಾಗಿ ಉತ್ತರ ಪ್ರದೇಶದ ಗಾ–ಜಿಯಾಬಾದ್‌ನಲ್ಲಿ ಹುಟ್ಟಿದ ಇವರು, 1989ರಲ್ಲಿ ವಾರಾಣಸಿ ಐಐ–ಟಿಯಿಂದ (ಬಿಎಚ್‌ಯು) ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. ಬೋಸ್ಟನ್ ಕಾಲೇಜ್‌ನಿಂದ ಪದವಿ ಹಾಗೂ ನಾರ್ತ್‌ಈಸ್ಟ್ ವಿಶ್ವವಿದ್ಯಾಲಯದಿಂದ ಎಂಬಿಎ ಪಡೆದಿದ್ದಾರೆ.

**ಶಂತನು ನಾರಾಯಣ್ (ಅಡೋಬಿ)**



ಪ್ರಸಿದ್ಧ ಸಾಫ್ಟ್‌ವೇರ್ ಕಂಪನಿ 'ಅಡೋಬಿ'ಯನ್ನು ಮುನ್ನಡೆಸುತ್ತಿರುವವರು ಹೈದರಾಬಾದ್‌ನ ಶಂತನು ನಾರಾಯಣ್ (58). ಇವರು 2007ರಿಂದ ಕಂಪನಿಯ ಸಿಇಒ ಹಾಗೂ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಶಂತನು, 1986ರಲ್ಲಿ ಓಹಿಯೋದ ಬೌಲಿಂಗ್ ಗ್ರೀನ್ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆದರು. ಬಳಿಕ 1993ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಪಡೆದರು. 1986ರಲ್ಲಿ ಸಿಲಿಕಾನ್ ವ್ಯಾಲಿಯಲ್ಲಿ ನವೋದ್ಯಮ ಮೆಷುರೆಕ್ಸ್ ಅಟೋಮೇಷನ್ ಸಿಸ್ಟಮ್ಸ್‌ನಲ್ಲಿ ವೃತ್ತಿ ಶುರು ಮಾಡಿದ್ದರು. ಅವರ ತಂದೆ ಪ್ಲಾಸ್ಟಿಕ್ ಕಂಪನಿ ನಡೆಸುತ್ತಿದ್ದರು.

## ನೌಕಾಪಡೆ ಮುಖ್ಯಸ್ಥರಾಗಿ ಹರಿಕುಮಾರ್ ನೇಮಕ

ಅಡ್ಮಿರಲ್ ಆರ್.ಹರಿಕುಮಾರ್ ಅವರು ನೌಕಾಪಡೆಯ ನೂತನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು. ಇದಕ್ಕೆ ಮೊದಲು ಅವರು ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್–ಇನ್–ಚೀಫ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಸೇವೆಯಿಂದ ನಿವೃತ್ತರಾಗಿರುವ ಅಡ್ಮಿರಲ್ ಕರಮ್‌ಬೀರ್ ಸಿಂಗ್ ಅವರಿಂದ ಅಧಿಕಾರ ಸ್ವೀಕರಿಸಿದರು.



ಹರಿಕುಮಾರ್ ಅವರು ನೌಕಾ ಪಡೆಯಲ್ಲಿ 39 ವರ್ಷಗಳ ಸೇವೆ ಸಲ್ಲಿಸಿದ್ದು, ವಿವಿಧ ಕಮಾಂಡ್‌ಗಳಲ್ಲಿ ಕೆಲಸ ಮಾಡಿದ್ದಾರೆ. ವಿಮಾನವಾಹಕ ಯುದ್ಧನೌಕೆ ಐಎನ್‌ಎಸ್ ವಿರಾಟ್ ಅನ್ನೂ ಮುನ್ನಡೆಸಿದ್ದ ಅವರು, ಪಶ್ಚಿಮ ನೌಕಾಸೇನೆಯ ಫ್ಲೀಟ್ ಆಫೀಸರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

## 5 ವರ್ಷಗಳಲ್ಲಿ ಪೌರತ್ವ ತ್ಯಜಿಸಿದ 6 ಲಕ್ಷ ಜನ

ಐದು ವರ್ಷಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನರು ಭಾರತೀಯ ಪೌರತ್ವವನ್ನು ತ್ಯಜಿಸಿದ್ದಾರೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಮಾಹಿತಿ ನೀಡಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾ ಲಯದಲ್ಲಿ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಒಟ್ಟಾರೆ 1,33,83,718 ಭಾರತೀಯರು ವಿದೇಶಗಳಲ್ಲಿ ನೆಲೆಸಿ ದ್ದಾರೆ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಲಿಖಿತ ಉತ್ತರ ನೀಡಿದ್ದಾರೆ.

2017ನೇ ಸಾಲಿನಲ್ಲಿ 1,33,049 ಜನರು ಭಾರತೀಯ ಪೌರತ್ವ ತ್ಯಜಿಸಿ ದ್ದಾರೆ. 2018ರಲ್ಲಿ 1,34,561 ಜನರು, 2019ರಲ್ಲಿ 1,44,017 ಜನರು, 2020ರಲ್ಲಿ 85,248 ಮಂದಿ ಹಾಗೂ 2021ರ ಸೆ. 30ರವರೆಗೆ 1,11,287 ಜನರು ಭಾರತೀಯ ಪೌರತ್ವ ತ್ಯಜಿಸಿದ್ದಾರೆ ಎಂದು ತಿಳಿಸಿದ್ದಾರೆ.

## 'ವಾಹನದ ಮೇಲೆ ರಾಜಕೀಯ ಪಕ್ಷದ ಧ್ವಜ ಅಪರಾಧವಲ್ಲ'

ವಾಹನಗಳ ಮೇಲೆ ರಾಜಕೀಯ ಪಕ್ಷಗಳ ಧ್ವಜ, ಚಿಹ್ನೆ ಹಾಕಿಕೊಂಡ ಕಾರ್ಯಕರ್ತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 171 (ಚುನಾವಣಾ ಖರ್ಚು ವೆಚ್ಚ ನೀಡುವಲ್ಲಿ ವಿಫಲ) ಅಡಿ ಪ್ರಕರಣ ದಾಖಲಿಸುವಂತಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

## ವಿಮಾ ಕಂಪನಿಗಳ ವಿಲೀನ ಇಲ್ಲ: ಹಣಕಾಸು ಇಲಾಖೆ

ಸರ್ಕಾರಿ ಸ್ವಾಮ್ಯದ ಸಾಮಾನ್ಯ ವಿಮಾ ಕಂಪನಿಗಳನ್ನು ವಿಲೀನಗೊಳಿಸುವ ಯಾವುದೇ ಆಲೋಚನೆಯೂ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕೃಷ್ಣರಾವ್ ಕರಾಡ್ ಅವರು ರಾಜ್ಯಸಭೆಗೆ ತಿಳಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಕಂಪನಿಗಳು: ನ್ಯೂ ಇಂಡಿಯಾ ಅಶ್ಯುರೆನ್ಸ್ ಕಂಪನಿ, ನ್ಯಾಷನಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್.

## ಭೋಪಾಲ್ ಅನಿಲ ದುರಂತಕ್ಕೆ 37 ವರ್ಷ

1984ರ ಡಿಸೆಂಬರ್ 2ರ ಸರಿರಾತ್ರಿ. ಭೋಪಾಲ್‌ನ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಲ್ಲಿ ಕ್ರಿಮಿ–ಕೀಟನಾಶಕ ತಯಾರಿಸಲು ಶೇಖರಿಸಿಟ್ಟಿದ್ದ ದ್ರವರೂಪಿ ಮೀಥೈಲ್ ಐಸೋಸಯನೇಟ್ ಸಂಯುಕ್ತದಿಂದ ಸೋರಿದ ವಿಷಾನಿಲ ಒಂದೇ ತಾಸಿನಲ್ಲಿ ಕಾರ್ಖಾನೆಯ ಸುತ್ತಮುತ್ತಲಿನ ಮೂರೂವರೆ ಸಾವಿರ ಜನರ ಜೀವ ತೆಗೆದಿತ್ತು. ಔದ್ಯೋಗಿಕ ರಂಗದ ಇತಿಹಾಸದಲ್ಲಿ ಪ್ರಪಂಚವೇ ಕಂಡರಿಯದ ಘೋರ ದುರಂತ ಇದಾಗಿತ್ತು.

ಎಳೆಯ ಕಂದಮ್ಮಗಳು, ಯುವಕರು, ಹೆಂಗಸರು, ವಯಸ್ಸಾದವರು ಕೊಟ್ಟಿಗೆಯ ದನಕರುಗಳ ಸಹಿತ ಬೆಂಕಿಗೆ ಸಿಲುಕಿದ ಹುಳಗಳಂತೆ ಸತ್ತುಬಿದ್ದಿದ್ದರು. ವಿಷಗಾಳಿಯು ಮರ–ಗಿಡಗಳನ್ನೂ ಕೊಂದುಹಾಕಿತ್ತು. ಸತ್ತವರ ಒಟ್ಟು ಸಂಖ್ಯೆ 20 ಸಾವಿರಕ್ಕೂ ಹೆಚ್ಚು. ಕಾಯಿಲೆಗೆ ತುತ್ತಾದವರು ಆರು ಲಕ್ಷ ಜನ. ಪರಿಮಿತಿಗೂ ಮೀರಿ ರಾಸಾಯನಿಕ ತುಂಬಿಟ್ಟಿದ್ದರಿಂದ ಹೀಗಾಗಿತ್ತು. ಅನಿಲ ಸೋರಿಕೆ ತಡೆಯುವ ಸುರಕ್ಷಾ ಕ್ರಮಗಳೂ ವ್ಯವಸ್ಥಿತವಾಗಿರಲಿಲ್ಲ. ಈ ದುರಂತದ ಕರಾಳ ನೆನಪಿಗೆ ಡಿಸೆಂಬರ್ 2 ಅನ್ನು ಪ್ರತಿವರ್ಷ 'ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ' ಎಂದು ಆಚರಿಸುತ್ತೇವೆ.


'ಭೋಪಾಲ್ ಅನಿಲ ದುರಂತ' ಎಂದೇ ವಿಶ್ವದಾದ್ಯಂತ ಕರೆಯಲಾಗುವ ಈ ದುರ್ಘಟನೆಯಿಂದ ನಾವು ಪಾಠ ಕಲಿಯಲಿಲ್ಲ ಎಂಬುದು ಪದೇಪದೇ ಸಾಬೀತಾಗುತ್ತಿದೆ. ಜನವಸತಿ ಪ್ರದೇಶದಲ್ಲಿ ಅಪಾಯಕಾರಿ ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸುವಂತಿಲ್ಲ ಎಂಬ ಕಾನೂನಿದೆ. ಆದರೆ ದೇಶದ ಹಲವು ನಗರ, ಪಟ್ಟಣ ಪ್ರದೇಶಗಳಲ್ಲಿ ಕಾರ್ಖಾನೆಗಳು ತಲೆ ಎತ್ತಿ ಅಪಾಯವನ್ನು ಮಡಿಲಲ್ಲಿಟ್ಟುಕೊಂಡೇ ನಡೆಯುತ್ತಿವೆ. ಅದಕ್ಕೆ ಕಳೆದ ಒಂದು ವರ್ಷದ ಅವಧಿಯಲ್ಲಿ ನಡೆದ ಅವಘಡಗಳೇ ಸಾಕ್ಷಿ.

## ಚಂಡಮಾರುತ 'ಜವಾದ್'

ಬಂಗಾಳಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ ಚಂಡಮಾರುತಕ್ಕೆ 'ಜವಾದ್' ಎಂದು ಹೆಸರಿಡಲಾಗಿದ್ದು, ಬಂಗಾಳಕೊಲ್ಲಿಯ ಪಶ್ಚಿಮದ ಕೇಂದ್ರ ಭಾಗ ಅಂದರೆ ಆಂಧ್ರಪ್ರದೇಶ, ಒಡಿಶಾದ ಕರಾವಳಿ ತೀರವನ್ನು ಅಪ್ಪಳಿಸಿತು.

## ರಾಜ್ಯದ ಶೇ 18 ಮಂದಿಗೆ ಶೌಚಾಲಯವಿಲ್ಲ

ಕರ್ನಾಟಕದ ಜನರಲ್ಲಿ ಶೌಚಾಲಯ ಲಭ್ಯತೆ ಇರುವವರಿಗಿಂತ, ಮೊಬೈಲ್ ಫೋನ್ ಮತ್ತು ಟಿ.ವಿ.ಹೊಂದಿರುವವರ ಪ್ರಮಾಣ ಅಧಿಕವಾಗಿದೆ ಎನ್ನುತ್ತವೆ. ರಾಷ್ಟ್ರೀಯ ಕುಟುಂಬ ಆರೋಗ್ಯಸಮೀಕ್ಷೆ–5ರ (ಎನ್‌ಎಫ್‌ಎಚ್‌ಎಸ್) ವರದಿಯ ದತ್ತಾಂಶಗಳು. ರಾಜ್ಯದ ಸಮಸ್ತ ಜನರಿಗೂ ಶೌಚಾಲಯ ಲಭ್ಯವಿದೆ. ರಾಜ್ಯವು ಬಯಲು ಬಹಿರ್ದೆಸೆ ಮುಕ್ತವಾಗಿದೆ ಎಂದು ಸ್ವಚ್ಛಭಾರತ ಅಭಿಯಾನದ ಜಾಲತಾಣ ಹೇಳುತ್ತದೆ.ಆದರೆ ಕೇಂದ್ರಸರ್ಕಾರವೇ ಬಿಡುಗಡೆ ಮಾಡಿರುವ ಎನ್‌ಎಫ್‌ಎಚ್‌ಎಸ್‌ವರದಿಯಲ್ಲಿ ರಾಜ್ಯದ ಶೇ18ರಷ್ಟು ಜನರಿಗೆ ಶೌಚಾಲಯವಿಲ್ಲ ಎಂದು ಹೇಳಲಾಗಿದೆ.




## ಮದ್ದೂರು: ಏಷ್ಯಾದ ಅತೀದೊಡ್ಡ ಎಳನೀರು ಮಾರುಕಟ್ಟೆ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಚಳಿ, ಮಳೆ ಹೆಚ್ಚಾಗಿರುವುದರಿಂದ ಮದ್ದೂರು ಎಪಿಎಂಸಿ ಎಳನೀರು ಮಾರುಕಟ್ಟೆ ವಹಿವಾಟಿನಲ್ಲಿ ತೀವ್ರ ಕುಸಿತ ಕಂಡಿದೆ. ಪ್ರತಿ ಎಳನೀರಿನ ಬೆಲೆಯಲ್ಲಿ ₹ 20 ಕಡಿಮೆಯಾಗಿದ್ದು ರೈತರು ಕಂಗಾಲಾಗಿದ್ದಾರೆ. 25 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರಿ ಪ್ರಮಾಣದಲ್ಲಿ ಬೆಲೆ ಕುಸಿದಿದೆ.

ಏಷ್ಯಾದ ಅತೀದೊಡ್ಡ ಎಳನೀರು ಮಾರುಕಟ್ಟೆ ಎಂಬ ಕೀರ್ತಿಗೆ ಪಾತ್ರವಾಗಿರುವ ಮದ್ದೂರು ಮಾರುಕಟ್ಟೆಯ ಒಟ್ಟು ವಹಿವಾಟಿನ ಶೇ 90ರಷ್ಟು ಎಳನೀರು ದೆಹಲಿಗೆ ರವಾನೆಯಾಗುತ್ತದೆ. ನಿತ್ಯ 50 ಲಾರಿ (6 ಲಕ್ಷ ಎಳನೀರು) ಹೊರರಾಜ್ಯಗಳಿಗೆ ತೆರಳುತ್ತವೆ. 40 ಲಾರಿಗಳು ದೆಹಲಿಗೆ ತೆರಳಿದರೆ ಉಳಿದವು ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶಕ್ಕೆ ತೆರಳುತ್ತವೆ.

## ಅಂಜುಗೆ ವರ್ಷದ ಮಹಿಳೆ ಪ್ರಶಸ್ತಿ



ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರಿಗೆ ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ ನೀಡುವ 'ವರ್ಷದ ಮಹಿಳೆ' ಪ್ರಶಸ್ತಿ ಸಂದಿದೆ. ಈ ಗೌರವ ಗಳಿಸಿದ ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ 44 ವರ್ಷದ ಅಂಜು ಪಾತ್ರರಾಗಿದ್ದಾರೆ.

ಪ್ರತಿಭಾನ್ವಿತ ಅಥ್ಲೀಟ್‌ಗಳ ಬೆಳವಣಿಗೆಗೆ ಮತ್ತು ಲಿಂಗಸಮಾನತೆ ಗಾಗಿ ಕಾರ್ಯನಿರ್ವಹಿಸುವ ಅಥ್ಲೀಟ್‌ಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. 2003ರ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಮಹಿಳೆಯರ ಲಾಂಗ್ ಜಂಪ್ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದರು.

## ಆರು ಸಾಧಕರಿಗೆ ಇನ್ಫೊಸಿಸ್ ಪ್ರಶಸ್ತಿ ಪ್ರದಾನ

**ಡಾ.ಚಂದ್ರಶೇಖರ್ ನಾಯರ್**

ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸೈನ್ಸ್ ಕ್ಷೇತ್ರದಲ್ಲಿನ ಸಾಧನೆಗೆ ಡಾ.ಚಂದ್ರಶೇಖರ್ ನಾಯರ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಡಾ.ಏಂಜಲಾ ಬರೆಟ್ಟೊ ಕ್ಸೇವಿಯರ್**

ಮಾನವೀಯ ಕ್ಷೇತ್ರದಲ್ಲಿನ ಸಾಧನೆಗಾಗಿ ಪೋರ್ಚುಗಲ್‌ನ ಲಿಸ್ಬನ್ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಡಾ. ಏಂಜೆಲಾ ಬ್ಯಾರೆಟೊ ಕ್ಸೇವಿಯರ್ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

**ಪ್ರೊ. ಮಹೇಶ್ ಶಂಕರನ್**

ಜೀವ ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಾಗಿ ಬೆಂಗಳೂರಿನ ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರದ (ಎನ್‌ಸಿಬಿಎಸ್) ಪ್ರೊ. ಮಹೇಶ್ ಶಂಕರನ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**ಡಾ. ನೀರಜ್ ಕಯಾಲ್**

ಗಣಿತ ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಾಗಿ ಬೆಂಗಳೂರಿನ ಮೈಕ್ರೋಸಾಫ್ಟ್ ಸಂಶೋಧನಾ ಪ್ರಯೋಗಾಲಯದ ಡಾ.ನೀರಜ್ ಕಯಾಲ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಪ್ರೊ. ಬೆಡಂಗದಾಸ್ ಮೊಹಾಂತಿ**

ಭೌತವಿಜ್ಞಾನ ಕ್ಷೇತ್ರದಲ್ಲಿ ಸಾಧನೆಗಾಗಿ ಭುವನೇಶ್ವರದಲ್ಲಿರುವ ರಾಷ್ಟ್ರೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಯ ಪ್ರೊ. ಬೆಡಂಗದಾಸ್ ಮೊಹಾಂತಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

**ಡಾ. ಪ್ರತೀಕ್ಷಾ ಬಾಕ್ಸಿ**

ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕಾನೂನು ಮತ್ತು ಆಡಳಿತದ ಅಧ್ಯಯನ ಕೇಂದ್ರದ ಡಾ. ಪ್ರತೀಕ್ಷಾ ಬಾಕ್ಸಿ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.




## ಕಲಬುರಗಿಯ ಸುಣ್ಣದ ಕಲ್ಲಿನ ಗಣಿಗೆ ಕೇಂದ್ರ ಪ್ರಶಸ್ತಿ

ಮಳಖೇಡ ರಸ್ತೆಯ ಆದಿತ್ಯನಗರದಲ್ಲಿರುವ ಅಲ್ಟ್ರಾಟೆಕ್‌ನ ರಾಜಶ್ರೀ ಸಿಮೆಂಟ್‌ಗೆ ಸೇರಿದ ರಾಜಶ್ರೀ ಸುಣ್ಣದ ಕಲ್ಲಿನ (ಲೈಮ್ ಸ್ಟೋನ್) ಗಣಿಗೆ ಸುಸ್ಥಿರ ನಿರ್ವಹಣೆಗಾಗಿ ಕೇಂದ್ರ ಗಣಿ ಸಚಿವಾಲಯ ಮತ್ತು ಇಂಡಿಯನ್ ಬ್ಯೂರೊ ಆಫ್ ಮೈನ್ಸ್ 5 ಸ್ಟಾರ್ ಪ್ರಮಾಣಪತ್ರ ನೀಡಿವೆ.

## ವಿಶ್ವದ ಅತಿದೊಡ್ಡ ನೀಲಮಣಿ ರತ್ನ ಶ್ರೀಲಂಕಾದಲ್ಲಿ ಪತ್ತೆ



ವಿಶ್ವದ ಅತಿ–ದೊಡ್ಡ, 310 ಕಿಲೋ ಗ್ರಾಂ ತೂಕದ ನೈಸರ್ಗಿಕ ನೀಲಮಣಿಯೊಂದು ಮೂರು ತಿಂಗಳ ಹಿಂದೆ ರತ್ನದ ಗಣಿಯಲ್ಲಿ ಸಿಕ್ಕಿರುವುದಾಗಿ ಶ್ರೀಲಂಕಾದ ಅಧಿಕಾರಿಗಳು ಘೋಷಿಸಿದ್ದಾರೆ.

ನೀಲಮಣಿಯನ್ನು ಪರೀಕ್ಷಿಸಿದ ಸ್ಥಳೀಯ ರತ್ನಶಾಸ್ತ್ರಜ್ಞರು, 300 ಕಿಲೋಗ್ರಾಂಗಳಿಗಿಂತ ಹೆಚ್ಚು ತೂಕವಿರುವುದರಿಂದ ಇದು ವಿಶ್ವದ ಅಪರೂಪದ ರತ್ನಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಅಂತರರಾಷ್ಟ್ರೀಯ ಸಂಸ್ಥೆಗಳು ಈ ರತ್ನವನ್ನು ಇನ್ನಷ್ಟೇ ಪ್ರಮಾಣೀಕರಿಸಬೇಕಾಗಿದೆ.

ಕೊಲಂಬೊ ಹೊರ ವಲಯದ ಹೊರಾಣ ಎಂಬಲ್ಲಿರುವ ರತ್ನದ ಗಣಿ ಮಾಲೀಕರೊಬ್ಬರ ಮನೆಯಲ್ಲಿ ನೀಲಮಣಿಯನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ರತ್ನಗಳಿಂದ ಸಮೃದ್ಧವಾಗಿರುವ ಶ್ರೀಲಂಕಾದ ರತ್ನಪುರ ಎಂಬಲ್ಲಿ ಈ ನೀಲಮಣಿ ಪತ್ತೆಯಾಗಿದೆ.

ರತ್ನಪುರವನ್ನು ಶ್ರೀಲಂಕಾದ ರತ್ನದ ರಾಜಧಾನಿ ಎಂದೂ ಕರೆಯಲಾಗುತ್ತದೆ. ಇಲ್ಲಿಂದ ಅಮೂಲ್ಯ ರತ್ನಗಳು ರಫ್ತಾಗುತ್ತವೆ.

## ಇಸ್ರೇಲ್‌ನ ಟೆಲ್ ಅವಿವ್ ಅತ್ಯಂತ ದುಬಾರಿ ನಗರ

ಇಸ್ರೇಲ್‌ನ ಟೆಲ್ ಅವಿವ್ ನಗರವು ವಾಸಿಸಲು ಅತ್ಯಂತ ದುಬಾರಿ ನಗರವಾಗಿ ಹೊರಹೊಮ್ಮಿದೆ ಎಂದು ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ (ಇಐಯು) ತಿಳಿಸಿದೆ.



ಈ ಹಿಂದೆ ಜಗತ್ತಿನ ಐದನೇ ದುಬಾರಿ ನಗರವಾಗಿದ್ದ ಟೆಲ್ ಅವಿವ್, ಈ ಬಾರಿ ಪ್ಯಾರಿಸ್ ಮತ್ತು ಸಿಂಗಪುರದಂತಹ ದುಬಾರಿ ನಗರಗಳನ್ನೂ ಮೀರಿ ಮೊದಲ ಸ್ಥಾನಕ್ಕೇರಿದೆ. ಇಸ್ರೇಲ್‌ನ ಟೆಲ್ ಅವಿವ್ ನಗರವು ವಾಸಿಸಲು ಅತ್ಯಂತ ದುಬಾರಿ ನಗರವಾಗಿ ಹೊರಹೊಮ್ಮಿದೆ ಎಂದು ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ (ಇಐಯು) ತಿಳಿಸಿದೆ.

ಈ ಹಿಂದೆ ಜಗತ್ತಿನ ಐದನೇ ದುಬಾರಿ ನಗರವಾಗಿದ್ದ ಟೆಲ್ ಅವಿವ್, ಈ ಬಾರಿ ಪ್ಯಾರಿಸ್ ಮತ್ತು ಸಿಂಗಪುರದಂತಹ ದುಬಾರಿ ನಗರಗಳನ್ನೂ ಮೀರಿ ಮೊದಲ ಸ್ಥಾನಕ್ಕೇರಿದೆ.

## ಗೀತಾ ಗೋಪಿನಾಥ್:IMFನ ಸಹಾಯಕ ವ್ಯವಸ್ಥಾಪಕ ನಿರ್ದೇಶಕಿ

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರಿಗೆ ಸಂಸ್ಥೆಯ 'ಒಂದನೇಯ ಸಹಾಯಕ ವ್ಯವಸ್ಥಾಪಕ ನಿರ್ದೇಶಕಿ' ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಇದು ಐಎಂಎಫ್‌ನ ಎರಡನೆಯ ಅತಿ–ದೊಡ್ಡ ಹುದ್ದೆ ಎಂದು ಐಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜೀವಾ ತಿಳಿಸಿದ್ದಾರೆ. ಭಾರತ ಮೂಲದ ಗೀತಾ ಅವರು ಐಎಂಎಫ್ ತೊರೆದು 2022ರ ಜನವರಿಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಮರಳಬೇಕಿತ್ತು. ಆದ–ರೆ, ಅವರು ಈಗ ಐಎಂಎಫ್‌ನಲ್ಲಿಯೇ ಮುಂದುವರಿಯಲು ತೀರ್ಮಾನಿಸಿದ್ದಾರೆ ಎಂದು ಕ್ರಿಸ್ಟಲೀನಾ ಹೇಳಿದ್ದಾರೆ.



## ಪೆಪ್ಸಿಕೊ: ಆಲೂಗಡ್ಡೆ ತಳಿಯ ಹಕ್ಕುಸ್ವಾಮ್ಯ ರದ್ದು

ಪೆಪ್ಸಿಕೊ ಇಂಡಿಯಾ ಕಂಪನಿಗೆ ಆಲೂಗಡ್ಡೆ ತಳಿಯೊಂದರ ಬೌದ್ಧಿಕ ಹಕ್ಕು ಸ್ವಾಮ್ಯ ನೀಡಿದ್ದನ್ನು ಸಸ್ಯ ತಳಿಗಳ ಸಂರಕ್ಷಣಾ ಪ್ರಾಧಿಕಾರವಾಗಿರುವ ಪಿಪಿವಿ ಆಂಡ್ ಎಫ್‌ಆರ್ ರದ್ದುಗೊಳಿಸಿದೆ. ಎಫ್‌ಎಲ್–2027 ತಳಿಯ ಬೌದ್ಧಿಕ ಹಕ್ಕುಸ್ವಾಮ್ಯವನ್ನು ಪೆಪ್ಸಿಕೊ ಕಂಪನಿಗೆ ನೀಡಲಾಗಿತ್ತು.

## ರೊನಾಲ್ಡೊ 800 ಗೋಲು

ಮ್ಯಾಂಚೆಸ್ಟರ್ ಯುನೈಟೆಡ್‌ಗೆ ಗೆಲುವು ತಂದುಕೊಟ್ಟ ಕ್ರಿಸ್ಟಿಯಾನೊ ರೊನಾಲ್ಡೊ 800ನೇ ಗೋಲು ಗಳಿಸಿದ ದಾಖಲೆಗೆ ಪಾತ್ರರಾದರು. ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಅವರ ಎರಡು ಗೋಲುಗಳ ಬಲದಿಂದ ಆರ್ಸೆನಲ್ ವಿರುದ್ಧ ಮ್ಯಾಂಚೆಸ್ಟರ್ ಯುನೈಟೆಡ್ 3–2ರಿಂದ ಗೆಲುವು ಸಾಧಿಸಿತು.



## ಕರ್ನಾಟಕದಲ್ಲಿ 40.32 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ನೀರಾವರಿ

ಕರ್ನಾಟಕದಲ್ಲಿರುವ 1.28 ಕೋಟಿ ಹೆಕ್ಟೇರ್ ಕೃಷಿ ಭೂಮಿಯ ಪೈಕಿ 40.32 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ನೀರಾವರಿ ವ್ಯವಸ್ಥೆ ಇದೆ ಎಂದು ರಾಜ್ಯಸಭೆಗೆ ತಿಳಿಸಲಾಗಿದೆ. ಜಿಡಿಪಿ ಪ್ರಮಾಣದಲ್ಲಿ ಹೆಚ್ಚಳ ಭರವಸೆದಾಯಕ, ಬೇಕು ಎಚ್ಚರ

ಪ್ರಸಕ್ತ ಆರ್ಥಿಕ ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಕಂಡಿರುವ ಬೆಳವಣಿಗೆ ಪ್ರಮಾಣ ಶೇಕಡ 8.4ರಷ್ಟು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ. ಹಿಂದಿನ ಆರ್ಥಿಕ ವರ್ಷದ (2020 21) ಇದೇ ತ್ರೈಮಾಸಿಕದ ದೇಶದ ಒಟ್ಟು ಆಂತರಿಕ ಉತ್ಪಾದನೆಯ ಮಟ್ಟಕ್ಕೆ ಹೋಲಿಸಿ ನೋಡಿದಾಗ, ಈ ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ. ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಾಗೂ ಇತರ ಕೆಲವು ಹಣಕಾಸು ಸಂಸ್ಥೆಗಳು ಮಾಡಿದ್ದ ಅಂದಾಜಿಗಿಂತ ತುಸು ಹೆಚ್ಚೇ ಇದೆ. ಆದರೆ, ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ದೇಶದ ಅರ್ಥ ವ್ಯವಸ್ಥೆಯು ಲಾಕ್‌ಡೌನ್ ಸ್ಥಿತಿಯಿಂದ ಅಗಷ್ಟೇ ಹೊರಬರುತ್ತಿತ್ತು ಎಂಬುದನ್ನು ನೆನಪಿನಲ್ಲಿ ಇರಿಸಿಕೊಳ್ಳಬೇಕು. ಹಾಗಾಗಿ, ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಇದ್ದ ಸ್ಥಿತಿಯ ಜೊತೆ ಹೋಲಿಕೆ ಮಾಡಿ, ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 8.4ಕ್ಕೆ ತಲುಪಿದೆ ಎನ್ನುವುದು ಸಮಾಧಾನ ತರುವಂಥದ್ದು ಹೌದಾದರೂ ತೀರಾ ಸಂಭ್ರಮಿಸಬಹುದಾದ ಸಂಗತಿಯೇನೂ ಅಲ್ಲ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದಲ್ಲಿ ನಡೆದ ಸೇವಾ ವಲಯ ಹಾಗೂ ಉತ್ಪಾದನಾ ವಲಯದ ಚಟುವಟಿಕೆಗಳ ಒಟ್ಟು ಮೌಲ್ಯವು ₹ 35.73 ಲಕ್ಷ ಕೋಟಿ, ಕೋವಿಡ್ ಪೂರ್ವದ 2019–20ನೇ ಸಾಲಿನ ಸೆಪ್ಟೆಂಬರ್ ತ್ರೈಮಾಸಿಕದಲ್ಲಿನ ಜಿಡಿಪಿಯ ಒಟ್ಟು ಮೌಲ್ಯಕ್ಕೆ (₹ 35.62 ಲಕ್ಷ ಕೋಟಿ) ಹೋಲಿಸಿದರೆ ಇದು ತುಸು ಹೆಚ್ಚು. ಅಂ–ದರೆ, ಜಿಡಿಪಿಯು ಕೋವಿಡ್ ಪೂರ್ವದ ಹಂತವನ್ನು ತಲುಪಿದೆ ಎನ್ನಲು ಅಡ್ಡಿಯಿಲ್ಲ. ಆದರೆ, ಅಂದಿನ ಮಟ್ಟವನ್ನು ದೊಡ್ಡ ಪ್ರಮಾಣದಲ್ಲಿ ಮೀರಿ ನಿಂತಿಲ್ಲ. ಅರ್ಥ ವ್ಯವಸ್ಥೆಯು ಯಾವ ದಿಕ್ಕಿನತ್ತ ಸಾಗಬಹುದು ಎನ್ನುವುದನ್ನು ತೀರಾ ಖಚಿತವಾಗಿ ಹೇಳಬಹುದಾದ ಸ್ಥಿತಿ ಈಗ ಇಲ್ಲ. ಹಣಕಾಸಿನ ಚಟುವಟಿಕೆಗಳಲ್ಲಿ ಹಲವು ಶುಭ ಸೂಚನೆಗಳು ಕಾಣುತ್ತಿವೆ. ಬಹುಕಾಲದ ನಂತರ ಹೂಡಿಕೆಗಳಲ್ಲಿ ದೊಡ್ಡ ಪ್ರಮಾಣದ ಹೆಚ್ಚಳ ಕಂಡುಬಂದಿದೆ. ಹಾಗಾಗಿ, ಭವಿಷ್ಯದ ಬಗ್ಗೆ ಆಶಾವಾದ ಇರಿಸಿಕೊಳ್ಳಲು ಅಡ್ಡಿಯಿಲ್ಲ.

## ಸೆಯಂಗ್‌ಗೆ ಚಿನ್ನದ ಸಂಭ್ರಮ; ಸಿಂಧುಗೆ ಬೆಳ್ಳಿ

ವಿಶ್ವ ಟೂರ್ ಬ್ಯಾಡ್ಮಿಂಟನ್ ಫೈನಲ್ಸ್‌ನಲ್ಲಿ ಸಿಂಧು, ಕೊರಿಯಾದ ಆನ್ ಸೆಯಂಗ್ ಎದುರು ಸೋತು ಬೆಳ್ಳಿ ಪದಕ ಪಡೆದರು. ವಿಶ್ವ ಚಾಂಪಿಯನ್ ಸಿಂಧು, ಮಹಿಳಾ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ 16–21, 12–21ರಿಂದ ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಸೆಯಂಗ್ ಎದುರು ಎಡವಿದರು.

## ಟೆಸ್ಟ್ ರ್‍ಯಾಂಕಿಂಗ್: ಅಗ್ರ 5 ಸ್ಥಾನ

ವಾಂಖೆಡೆ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 372 ರನ್‌ಗಳಿಂದ ಗೆದ್ದ ವಿರಾಟ್ ಕೊಹ್ಲಿ ಬಳಗ ಎರಡು ಪಂದ್ಯಗಳ ಸರಣಿಯನ್ನು 1–0 ಅಂತರದಲ್ಲಿ ತನ್ನದಾಗಿಸಿಕೊಂಡಿತು. ಈ ಜಯದೊಂದಿಗೆ ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಭಾರತ ಅಗ್ರ ಸ್ಥಾನಕ್ಕೆ ಜಿಗಿಯಿತು.

**ಟೆಸ್ಟ್ ರ್‍ಯಾಂಕಿಂಗ್: ಅಗ್ರ 5 ಸ್ಥಾನ**

| ರ್‍ಯಾಂಕ್ | ತಂಡ | ರೇಟಿಂಗ್ |
|---|---|---|
| 1 | ಭಾರತ | 124 |
| 2 | ನ್ಯೂಜಿಲೆಂಡ್ | 121 |
| 3 | ಆಸ್ಟ್ರೇಲಿಯಾ | 108 |
| 4 | ಇಂಗ್ಲೆಂಡ್ | 107 |
| 5 | ಪಾಕಿಸ್ತಾನ | 92 |

## ‘ಕೊಲ್ಲುವ ಪರವಾನಗಿ’:AFPSA ವಿರುದ್ಧ ಮತ್ತೆ ಕೂಗು

ಸೇನೆಗೆ ನೀಡಿರುವ ವಿಶೇಷಾಧಿಕಾರವನ್ನು ವಾಪಸ್ ಪಡೆಯಬೇಕು ಎಂಬ ಕೂಗು, ನಾಗಾಲ್ಯಾಂಡ್‌ನಲ್ಲಿ ಸೈನಿಕರ ಗುಂಡಿಗೆ 14 ನಾಗರಿಕರು ಬಲಿಯಾದ ನಂತರ ಮತ್ತೆ ಮುನ್ನೆಲೆಗೆ ಬಂದಿದೆ. ಸೇನೆಗೆ ವಿಶೇಷಾಧಿಕಾರವನ್ನು ನೀಡುವ ‘ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958’ ಅನ್ನು (ಆಫ್‌ಸ್ಪ) ರದ್ದುಪಡಿಸಬೇಕು ಎಂದು ನಾಗಾಲ್ಯಾಂಡ್, ಮಣಿಪುರದ ಮುಖ್ಯಮಂತ್ರಿಗಳು ಆಗ್ರಹಿಸಿದ್ದಾರೆ. ಆಫ್‌ಸ್ಪ ರದ್ದುಗೊಳಿಸಿ ಎಂದು ಈಶಾನ್ಯ ಭಾರತದ ರಾಜ್ಯಗಳ ಜನರು ಮತ್ತೆ ಬೀದಿಗಿಳಿದು ಹೋರಾಟ ಆರಂಭಿಸಿದ್ದಾರೆ.

1958ರ ಮೇನಲ್ಲಿ ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಸೇನೆಗೆ ವಿಶೇಷಾಧಿಕಾರ ನೀಡಲಾಗಿತ್ತು. ನಂತರದ ಕೆಲವೇ ತಿಂಗಳಲ್ಲಿ ಸಂಸತ್ತಿನಲ್ಲಿ ಸಂಬಂಧಿತ ಮಸೂದೆಯನ್ನು ಮಂಡಿಸಿ, ಅನುಮೋದನೆ ಪಡೆಯಲಾಯಿತು. ಕಾಯ್ದೆ ತರುತ್ತಿರುವುದರ ಕಾರಣ ಮತ್ತು ಅಗತ್ಯವನ್ನು ಕಾಯ್ದೆಯ ಪೀಠಿಕೆಯಲ್ಲಿ ವಿವರಿಸಲಾಗಿದೆ.

‘ಈಶಾನ್ಯ ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಗಲಭೆ ಮತ್ತು ಹಿಂಸಾಚಾರವು ಸಾಮಾನ್ಯ ಎಂಬಂತಾಗಿದೆ. ಅಲ್ಲಿನ ರಾಜ್ಯಗಳ ಆಡಳಿತ ಯಂತ್ರಗಳು ಈ ಆಂತರಿಕ ಪ್ರಕ್ಷುಬ್ಧ ಸ್ಥಿತಿಯನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಹೀಗಾಗಿ ಪ್ರಕ್ಷುಬ್ಧ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಸೇನೆಯ ಅಧಿಕಾರಿಗಳಿಗೆ ಈ ಕಾಯ್ದೆಯ 4ನೇ ಸೆಕ್ಷನ್ ಅಡಿ ವಿಶೇಷ ಅಧಿಕಾರವನ್ನು ನೀಡಲಾಗುತ್ತದೆ. ಸೇನೆಯ ಅಧಿಕಾರಿಗಳಿಗೆ ವಿಶೇಷ ಅಧಿಕಾರದ ಜತೆಗೆ ನೀಡಲಾಗಿರುವ ನಿಬಂಧನೆಗಳನ್ನು ಕಾಯ್ದೆಯ 5ನೇ ಸೆಕ್ಷನ್ ಅಡಿ ವಿವರಿಸಲಾಗಿದೆ’ ಎಂದು ಆಫ್‌ಸ್ಪ ಕಾಯ್ದೆಯ ಪೀಠಿಕೆಯಲ್ಲಿ ವಿವರಿಸಲಾಗಿದೆ.

ಈ ಕಾಯ್ದೆಯನ್ನು ಜಾರಿಗೆ ತಂದಾಗ ಅಸ್ಸಾಂ ಮತ್ತು ಮಣಿಪುರವನ್ನು ಮಾತ್ರ ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾಗಿತ್ತು. ನಂತರದ ವರ್ಷಗಳಲ್ಲಿ ಈಶಾನ್ಯ ಭಾರತದ ಎಲ್ಲಾ ರಾಜ್ಯಗಳನ್ನು ಹಂತಹಂತವಾಗಿ, ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾಗಿತ್ತು. ಈಚಿನ ವರ್ಷಗಳಲ್ಲಿ ಕೆಲವು ರಾಜ್ಯಗಳನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ.

**ವಿಶೇಷಾಧಿಕಾರ:**

ಸಶಸ್ತ್ರ ಪಡೆಯ ತುಕಡಿಗಳ ಮುಖ್ಯಸ್ಥ ಅಥವಾ ವಾರಂಟ್ ಅಧಿಕಾರಿ ಅಥವಾ ತುಕಡಿ ಮುಖ್ಯಸ್ಥನ ಅಧೀನ ಅಧಿಕಾರಿ ಅಥವಾ ಅದೇ ರ್‍ಯಾಂಕ್‌ನ ಬೇರೆ ಅಧಿಕಾರಿಗಳಿಗೆ, ಈ ಅಧಿಕಾರಗಳು ಅನ್ವಯವಾಗುತ್ತದೆ.

1ಈ ಕಾಯ್ದೆ ಅಡಿ ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾದ ಪ್ರದೇಶದಲ್ಲಿ ಸಾರ್ವಜನಿಕ ಸುವ್ಯವಸ್ಥೆ ಕಾಪಾಡಲು ಅಗತ್ಯ ಎನಿಸಿದರೆ ಸೇನಾಧಿಕಾರಿ ಅಥವಾ ಸೈನಿಕರು ಎಚ್ಚರಿಕೆ ನೀಡಿ, ನಂತರ ಗುಂಡು ಹಾರಿಸಬಹುದು. ಗುಂಡು ಹಾರಿಸಿದ್ದರ ಪರಿಣಾಮ ಸಾವು ಸಂಭವಿಸುವ ಸಾಧ್ಯತೆ ಇದ್ದರೂ, ಗುಂಡು ಹಾರಿಸಬಹುದು. ಘೋಷಿತ ಪ್ರದೇಶದಲ್ಲಿನ ಯಾವುದೇ ವ್ಯಕ್ತಿಯು ಕಾನೂನನ್ನು ಉಲ್ಲಂಘಿಸಿದಾಗ ಅಥವಾ ಆ ಕ್ಷಣದಲ್ಲಿ ಜಾರಿಯಲ್ಲಿರುವ ಆದೇಶವನ್ನು ಉಲ್ಲಂಘಿಸಿದಾಗ ಇದು ಅನ್ವಯವಾಗುತ್ತದೆ. ಶಸ್ತ್ರಗಳನ್ನು ಸಾಗಿಸುವಾಗ ಅಥವಾ ಶಸ್ತ್ರಾಸ್ತ್ರವಾಗಿ ಬಳಸಬಹುದಾದ ವಸ್ತುಗಳನ್ನು ಸಾಗಿಸುವಾಗ ಅಥವಾ ಸ್ಫೋಟಕ ವಸ್ತುಗಳನ್ನು ಸಾಗಿಸುವಾಗಲೂ ಈ ಅಧಿಕಾರ ಅನ್ವಯವಾಗುತ್ತದೆ

2 ಮೇಲ್ನೋಟಕ್ಕೆ ಅಪರಾಧ ಎಂದು ಕಾಣಿಸುವ ಕೃತ್ಯ ಎಸಗಿರುವ ಅಥವಾ ಅಂತಹ ಕೃತ್ಯ ಎಸಗಿದ್ದಾನೆ ಎಂಬ ಶಂಕಿತ ವ್ಯಕ್ತಿಯನ್ನು ವಾರಂಟ್ ಇಲ್ಲದೆ ಬಂಧಿಸಬಹುದು. ಒಬ್ಬ ವ್ಯಕ್ತಿಯು ಇಂತಹ ಕೃತ್ಯ ಎಸಗಲಿದ್ದಾನೆ ಎಂಬ ಸೂಚನೆ ಸಿಕ್ಕಾಗಲೂ ಆ ವ್ಯಕ್ತಿಯನ್ನು ವಾರಂಟ್ ಇಲ್ಲದೆ ಬಂಧಿಸಬಹುದು. ಬಂಧನದ ವೇಳೆ ಅಗತ್ಯವಿದ್ದರೆ ಬಲವನ್ನು ಪ್ರಯೋಗಿಸಬಹುದು


3ತಲೆಮರೆಸಿಕೊಂಡ ವ್ಯಕ್ತಿಯನ್ನು ಹುಡುಕಲು ಅಥವಾ ಕಳ್ಳತನ ಮಾಡಲಾದ ಸ್ವತ್ತನ್ನು ವಶಪಡಿಸಿಕೊಳ್ಳಲು ಅಥವಾ ಕಾನೂನುಬಾಹಿರವಾಗಿ ಇರಿಸಿಕೊಳ್ಳಲಾದ ಶಸ್ತ್ರ, ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲು ಸೇನಾಧಿಕಾರಿಗಳು ಯಾವುದೇ ಸ್ಥಿರಾಸ್ತಿಯನ್ನು ವಾರಂಟ್ ಇಲ್ಲದೆ ಪ್ರವೇಶಿಸಬಹುದು ಮತ್ತು ಅಲ್ಲಿ ಶೋಧಕಾರ್ಯ ನಡೆಸಬಹುದು. ಇಂತಹ ಕಾರ್ಯಾಚರಣೆ ವೇಳೆ ಅಗತ್ಯಬಿದ್ದರೆ ಬಲವನ್ನು ಪ್ರಯೋಗಿಸಬಹುದು

ಈ ಕಾಯ್ದೆಯ ಅಡಿ ‘ಪ್ರಕ್ಷುಬ್ಧ ಪ್ರದೇಶ’ ಎಂದು ಘೋಷಿಸಲಾದ ಪ್ರದೇಶದಲ್ಲಿ ಕಾರ್ಯನಿರ್ವಹಿಸುವಾಗ ಸೇನೆಯ ಯಾವುದೇ ರ್‍ಯಾಂಕ್‌ನ ಅಧಿಕಾರಿಗಳು ನಡೆಸುವ, ಯಾವುದೇ ಕೃತ್ಯದ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದನ್ನು ಈ ಕಾಯ್ದೆಯು ನಿರ್ಬಂಧಿಸುತ್ತದೆ. ‘ಈ ಕಾಯ್ದೆ ಅಡಿ ನೀಡಲಾದ ಅಧಿಕಾರವನ್ನು ಚಲಾಯಿಸುವಾಗ ಸೇನೆಯ ಯಾವುದೇ ವ್ಯಕ್ತಿಯು ಎಸಗುವ ಯಾವುದೇ ಕೃತ್ಯದ ವಿರುದ್ಧ ವಿಚಾರಣೆ, ಪ್ರಕರಣ, ಕಾನೂನು ಪ್ರಕ್ರಿಯೆ ಆರಂಭಿಸಬಾರದು’ ಎಂದು ಕಾಯ್ದೆಯ 6ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

‘ಈ ಕಾಯ್ದೆ ಅಡಿ ಸೇನಾಧಿಕಾರಿಗಳು ತಾವು ಬಂಧಿಸಿದ ವ್ಯಕ್ತಿಯನ್ನು ಹತ್ತಿರದ ಪೊಲೀಸ್ ಠಾಣೆಗೆ ತಕ್ಷಣವೇ ಹಸ್ತಾಂತರಿಸಬೇಕು’ ಎಂದು ಈ ಕಾಯ್ದೆಯ 5ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಈ ಕಾಯ್ದೆಯ ಅಡಿ ನೀಡಲಾಗಿರುವ ವಿಶೇಷಾಧಿಕಾರವನ್ನು ‘ಕೊಲ್ಲುವ ಪರವಾನಗಿ’ ಎಂದು ಈಶಾನ್ಯ ಭಾರತದ ಜನರು ಕರೆಯುತ್ತಾರೆ. ‘ಈ ಕಾಯ್ದೆ ಅಡಿ ಕಾರ್ಯನಿರ್ವಹಿಸುವ ಸೈನಿಕರು, ಸೇನಾಧಿಕಾರಿಗಳು ಎಸಗುವ ಯಾವುದೇ ಕೃತ್ಯಕ್ಕೂ ಅವರನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸೈನಿಕರು ಇಲ್ಲಿ ಮನಬಂದಂತೆ ವರ್ತಿಸುತ್ತಾರೆ. ಅಮಾಯಕರನ್ನು ಕೊಲ್ಲುತ್ತಾರೆ. ಅತ್ಯಾಚಾರ ಎಸಗುತ್ತಾರೆ. ಹೀಗೆ ಈ ಕಾಯ್ದೆ ದುರ್ಬಳಕೆಯಾಗುತ್ತಿದೆ. ಹೀಗಾಗಿ ಕಾಯ್ದೆಯನ್ನು ವಾಪಸ್ ಪಡೆಯಬೇಕು’ ಎಂಬುದು ಈಶಾನ್ಯ ಭಾರತದ ರಾಜ್ಯಗಳ ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಜನರ ಆಗ್ರಹ. ಈ ಕಾಯ್ದೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಮಣಿಪುರದ ಇರೋಮ್ ಶರ್ಮಿಳಾ ಚಾನು ಅವರು 16 ವರ್ಷ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಈ ಕಾಯ್ದೆಯ ವಿರುದ್ಧ ಆಗಾಗ ಹೋರಾಟಗಳು ನಡೆಯುತ್ತಲೇ ಇವೆ.

## ನೀಲಮಣಿ ಫೂಕನ್, ದಾಮೋದರ್ ಮೌಜೋಗೆ ಜ್ಞಾನಪೀಠ ಪ್ರಶಸ್ತಿ



ಅಸ್ಸಾಮಿ ಕವಿ ನೀಲಮಣಿ ಫೂಕನ್ ಮತ್ತು ಕೊಂಕಣಿ ಸಾಹಿತಿ ದಾಮೋದರ ಮೌಜೋ ಅವರಿಗೆ ಕ್ರಮವಾಗಿ 56 ಮತ್ತು 57ನೇ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಫೂಕನ್ ಅವರು 2020ರ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದರೆ, ಮೌಜೋ ಅವರನ್ನು 2021ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

1933ರಲ್ಲಿ ಅಸ್ಸಾಂನ ದೇಗಾರ್ಗಾವ್ ನಲ್ಲಿ ಜನಿಸಿದ ಫೂಕನ್ ಅವರು, ಅಸ್ಸಾಂ ಸಾಹಿತ್ಯಕ್ಕೆ ಫ್ರೆಂಚ್ ಪ್ರತಿಮಾ ಸಿದ್ಧಾಂತ ಆಧಾರಿತ ಆಧುನಿಕತೆ ಯನ್ನು ತಂದುಕೊಟ್ಟರು. ಇದು ಅಸ್ಸಾಮಿ ಭಾಷೆಗೆ ಸಂದಿರುವ ಮೂರನೇ ಜ್ಞಾನಪೀಠ ಪ್ರಶಸ್ತಿ.

1944ರಲ್ಲಿ ಗೋವಾದಲ್ಲಿ ಜನಿಸಿದ ದಾಮೋದರ ಮೌಜೋ ಅವರು ತಮ್ಮ ಸಣ್ಣ ಕತೆಗಳು ಮತ್ತು ಕಾದಂಬರಿಗಳಿಗೆ ಪ್ರಸಿದ್ಧರು. ಇದು ಕೊಂಕಣಿ ಭಾಷೆಗೆ ಸಂದಿರುವ ಎರಡನೇ ಜ್ಞಾನಪೀಠ. ಜಿ.ಎನ್. ದೇವಿ, ಎಂ.ಎಂ. ಕಲಬುರ್ಗಿ ಮೊದಲಾದವರೊಡನೆ ಮೌಜೋ ಕೆಲಸ ಮಾಡಿದ್ದಾರೆ. ಕಲಬುರ್ಗಿ ಅವರ ಸಂಪಾದಕತ್ವದ 'ವಚನ ಸಂಪುಟ'ವನ್ನು ಕೊಂಕಣಿ ಭಾಷೆಗೆ ಅನುವಾದ ಮಾಡಿದ ತಂಡದ ಮುಖ್ಯಸ್ಥರಾಗಿದ್ದರು.

## ಬ್ಯಾಡ್ಮಿಂಟನ್: ಸೈನಿಗೆ ಪ್ರಶಸ್ತಿ



ಭಾರತದ ಅಭಿಷೇಕ್ ಸೈನಿ ಅವರು ಬಾಂಗ್ಲಾದೇಶ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಮಹಿಳಾ ಡಬಲ್ಸ್‌ನಲ್ಲಿ ಭಾರತದ ಮೆಹರೀನ್ ರಿಜಾ–ಆರತಿ ಸಾರಾ ಸುನಿಲ್ ಅವರು ಪ್ರಶಸ್ತಿಗೆ ಮುತ್ತಿಕ್ಕಿದರು.

## ಈಜು: ನಿರಂಜನ್‌ಗೆ ಏಳು ಪದಕ; ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ



ಭಾರತದ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್ ಅವರು ಕ್ರೊವೇಷ್ಯಾ ಅಂತರರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಏಳು ಪದಕ ಗೆದ್ದರು. ಇದರೊಂದಿಗೆ 2022ರ ವಿಶ್ವ ಪ್ಯಾರಾ ಈಜು ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದರು.

ಕ್ರೊವೇಷ್ಯಾದ ಜಾಗ್ರೇಬ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರಿನ ನಿರಂಜನ್ ಅವರಿಗೆ ಆರು ಚಿನ್ನ ಮತ್ತು ಒಂದು ಕಂಚಿನ ಪದಕ ಒಲಿದವು.

## ರಷ್ಯಾ ಜತೆಗೆ ರಕ್ಷಣಾ ಸಹಕಾರ ವಿಸ್ತರಣೆ

ಅಮೆರಿಕದ ಜತೆಗಿನ ಸಂಬಂಧಕ್ಕೆ ಧಕ್ಕೆಯಾಗುವ ಆತಂಕದ ನಡುವೆಯೂ ರಷ್ಯಾ ಜತೆಗಿನ ತನ್ನ ಸೇನಾ ತಾಂತ್ರಿಕ ಸಹಕಾರ ವಿಸ್ತರಣೆ ಒಪ್ಪಂದ ಮತ್ತು ರಕ್ಷಣಾ ಸಹಕಾರ ಒಪ್ಪಂದಕ್ಕೆ ಕೇಂದ್ರ ಸರ್ಕಾರವು ಸಹಿಮಾಡಿದೆ. ಚೀನಾದ ಅಪ್ರಚೋದಿತ ಅತಿ–ಕ್ರಮಣವನ್ನು ತಡೆಯಲು ರಷ್ಯಾದ ಜತೆಗೆ ರಕ್ಷಣಾ ಒಪ್ಪಂದ ಮಾಡಿಕೊಳ್ಳುವುದು ಅತ್ಯಗತ್ಯ ಎಂದು ರಕ್ಷಣಾ ಸಚಿವಾಲಯವು ಹೇಳಿದೆ.



ರಷ್ಯಾದಿಂದ ಎಸ್–400 ಟ್ರಯಂಫ್ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ₹39,000 ಕೋಟಿ ವೆಚ್ಚದಲ್ಲಿ ಖರೀದಿಸಲು ಕೇಂದ್ರ ಸರ್ಕಾರವು 2018ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಈ ಖರೀದಿ ವಿರುದ್ಧ ಭಾರತದ ಮೇಲೆ ವಾಣಿಜ್ಯ ನಿರ್ಬಂಧ ಹೇರುವ ಎಚ್ಚರಿಕೆಯನ್ನು ಅಮೆ–ರಿಕ ನೀಡಿತ್ತು. ನಿರ್ಬಂಧದಿಂದ ವಿನಾಯಿತಿ ದೊರೆಯುವುದು ಖಚಿತವಾಗದಿದ್ದರೂ ಒಪ್ಪಂದವನ್ನು ಮುಂದುವರಿಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆ.

## ಭದ್ರತಾಪಡೆಗಳಿಗೆ ಡ್ರೋನ್ ಪ್ರತಿರೋಧ ವ್ಯವಸ್ಥೆ

ಗಡಿಗಳ ಭದ್ರತೆಗೆ ಡ್ರೋನ್‌ಗಳ ಮೂಲಕ ಈಗ ಹೊಸದಾಗಿ ಅಪಾಯ ಎದುರಾಗುತ್ತಿದೆ. ಹಾಗಾಗಿ, ಗಡಿ ಭದ್ರತೆ ಹಾಗೂ ಯೋಧರ ರಕ್ಷಣೆಗಾಗಿ ಜಾಗತಿಕ ಮಟ್ಟದ ಅತ್ಯುತ್ತಮ ತಂತ್ರಜ್ಞಾನ ಒದಗಿಸಲು ಸರ್ಕಾರ ಬದ್ಧವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಡ್ರೋನ್ ಪ್ರತಿರೋಧ ವ್ಯವಸ್ಥೆಯನ್ನು ಅಭಿವೃದ್ಧಿಸಲು ಬಿಎಸ್‌ಎಫ್, ಎನ್‌ಎಸ್‌ಜಿ ಹಾಗೂ ಡಿಆರ್‌ಡಿಒ ಜಂಟಿ ಯಾಗಿ ಕಾರ್ಯಪ್ರವೃತ್ತವಾಗಿವೆ. ಈ ತಂತ್ರ ಜ್ಞಾನ ಶೀಘ್ರವೇ ಭದ್ರತಾಪಡೆಗಳಿಗೆ ಲಭ್ಯವಾಗುವಂತೆ ಮಾಡಲಾಗುವುದು ಬಿಎಸ್‌ಎಫ್‌ಅನ್ನು 1965ರ ಡಿಸೆಂಬರ್ 1ರಂದು ಸ್ಥಾಪಿಸಲಾಗಿದೆ. ಇದೇ ಮೊದಲ ಬಾರಿಗೆ ದೆಹಲಿ ಬದಲಾಗಿ, ಪಾಕಿಸ್ತಾನ ಗಡಿಗೆ ಸಮೀಪದ ಜೈಸಲ್ಮೇರ್‌ನಲ್ಲಿ ಸಂಸ್ಥಾಪನಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

## ನಾಲ್ಕನೆಯ ಅತಿಹೆಚ್ಚಿನ ವಿದೇಶಿ ವಿನಿಮಯ ಮೀಸಲು

ಭಾರತದ ಬಳಿ ಈಗ ಇರುವ ವಿದೇಶಿ ವಿನಿಮಯ ಮೀಸಲಿನ ಮೊತ್ತವು ವಿಶ್ವದಲ್ಲಿಯೇ ನಾಲ್ಕನೆಯ ಅತಿಹೆಚ್ಚಿನದು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ತಿಳಿಸಿದ್ದಾರೆ.

ನವೆಂಬರ್ 19ರ ಅಂಕಿ–ಅಂಶದ ಪ್ರಕಾರ ದೇಶದಲ್ಲಿ ₹ 48.24 ಲಕ್ಷ ಕೋಟಿ ವಿದೇಶಿ ವಿನಿಮಯ ಮೀಸಲು ಇದೆ.

## ಸೌದಿ ಗ್ರ್ಯಾನ್‌ಪ್ರಿ: ಹ್ಯಾಮಿಲ್ಟನ್‌ಗೆ ಪ್ರಶಸ್ತಿ



ಬ್ರಿಟನ್‌ನ ಲೂಯಿಸ್ ಹ್ಯಾಮಿಲ್ಟನ್ ಅವರು ಸೌದಿ ಅರೇಬಿಯಾ ಫಾರ್ಮುಲಾ ಒನ್ ಗ್ರ್ಯಾನ್‌ಪ್ರಿಯಲ್ಲಿ ಪ್ರಶಸ್ತಿ ಜಯಿಸಿದರು. ಇದರೊಂದಿಗೆ ಎಂಟನೇ ಬಾರಿ ವಿಶ್ವ ಚಾಂಪಿಯನ್‌ಷಿಪ್ ಜಯದ ಆಸೆಗೆ ಜೀವಂತವಾಗಿರಿಸಿದರು.

## ಹೆಲಿಕಾಪ್ಟರ್ ಪತನ: ಬಿಪಿನ್ ರಾವತ್ ಸೇರಿ 13 ಮಂದಿ ಸಾವು

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕೂನೂರಿನಲ್ಲಿ 8 ಡಿಸೆಂಬರ್ 2021 ಭಾರತೀಯ ವಾಯುಪಡೆಯ ಎಂಐ–17ವಿ5 ಹೆಲಿಕಾಪ್ಟರ್ ಪತನ ಗೊಂಡಿತು. ಈ ದುರಂತದಲ್ಲಿ, ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ (63), ಅವರ ಪತ್ನಿ ಮಧುಲಿಕಾ, 7 ಅಧಿಕಾರಿಗಳು ಹಾಗೂ ನಾಲ್ವರು ಸಿಬ್ಬಂದಿ ಮೃತಪಟ್ಟಿದ್ದಾರೆ.



ರಾವತ್, 2019ರಲ್ಲಿ ಭಾರತದ ಸೇನಾಪಡೆಗಳ ಮೊದಲ ಮುಖ್ಯಸ್ಥರಾಗಿ ನೇಮಕಗೊಂಡಿದ್ದರು. ಬಿಪಿನ್ ರಾವತ್ ಅವರು, ಈ ಸ್ವರೂಪದ ಅಪಘಾತದಲ್ಲಿ ಮೃತಪಟ್ಟ ಸೇನೆಯ ಮೊದಲ ಅತ್ಯುನ್ನತ ಅಧಿಕಾರಿ.

ರಾವತ್ ಅವರು ವೆಲ್ಲಿಂಗ್ ಟನ್‌ನಲ್ಲಿನ ರಕ್ಷಣಾ ಸೇವಾ ಸಿಬ್ಬಂದಿ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಉಪನ್ಯಾಸ ನೀಡಲು ತೆರಳುತ್ತಿದ್ದರು.

**ಜೀವಕ್ಕೆ ಎರವಾದ ಹೆಲಿಕಾಪ್ಟರ್ ಪಯಣ:**

2011ರಲ್ಲಿ, ಅರುಣಾಚಲ ಪ್ರದೇಶದ ಅಂದಿನ ಮುಖ್ಯಮಂತ್ರಿ ದೋರ್ಜಿ ಖಂಡು ಅವರು ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿದ್ದರು. ತವಾಂಗ್‌ನಿಂದ ಹೊರಟಿದ್ದ ಅವರಿದ್ದ ಹೆಲಿಕಾಪ್ಟರ್ ನಾಪತ್ತೆಯಾಗಿತ್ತು. ನಂತರ, ಗುಡ್ಡಗಾಡು ಪ್ರದೇಶದಲ್ಲಿ, ಹವಾಮಾನ ವೈಪರೀತ್ಯದಿಂದ ಅದು ಪತನಗೊಂಡಿರುವುದು ದೃಢಪಟ್ಟಿತ್ತು. ಅವರ ಜತೆಗಿದ್ದ ಇತರ ನಾಲ್ವರೂ ಮೃತಪಟ್ಟಿದ್ದರು. ಪವನ್ ಹನ್ಸ್ ಸಂಸ್ಥೆಯ ಏಕ ಎಂಜಿನ್‌ನ ಯುರೋಕಾಪ್ಟರ್ ಬಿ8 ಹೆಲಿಕಾಪ್ಟರ್‌ನ ಅವಶೇಷಗಳು ಲೊಬೊತಾಂಗ್ ಪ್ರದೇಶದ ಕೇಲಾ ಎಂಬಲ್ಲಿ ಪತ್ತೆಯಾಗಿದ್ದವು.

**ಹೆಚ್ಚು ಸುರಕ್ಷತಾ ಸೌಲಭ್ಯಗಳ ಚಾಪರ್ ಎಂಐ–17ವಿ5:**

ಅತ್ಯಾಧುನಿಕ ಎಂಐ–17ವಿ5 ಹೆಲಿಕಾಪ್ಟರ್‌ಗಳನ್ನು 2012ರಿಂದ ಬಳಸಲಾಗುತ್ತಿದೆ. ರಾತ್ರಿ ಸಂಚಾರಕ್ಕೆ ಸಹಕಾರಿಯಾಗಬಹುದಾದ 'ನೈಟ್ ವಿಷನ್' ವ್ಯವಸ್ಥೆ ಹಾಗೂ ವಾತಾವರಣದ ಕುರಿತು ಮಾಹಿತಿ ಪಡೆಯುವ ವೆದರ್ ರೇಡಾರ್ ಅನ್ನು ಈ ಹೆಲಿಕಾಪ್ಟರ್ ಒಳಗೊಂಡಿದೆ. ಈ ಹೆಲಿಕಾಪ್ಟರ್ ತನ್ನ ವರ್ಗದಲ್ಲೇ ಅತ್ಯಾಧುನಿಕವಾದ ಸುರಕ್ಷತಾ ಸವಲತ್ತುಗಳನ್ನು ಹೊಂದಿದೆ.

ರಷ್ಯನ್ ಹೆಲಿಕಾಪ್ಟರ್ ಕಂಪನಿಯ ಸಹಕಂಪನಿ ಕಜಾನ್ ಹೆಲಿಕಾಪ್ಟರ್ ಎಂಐ–17ವಿ5 ಹೆಲಿಕಾಪ್ಟರ್ ಅನ್ನು ಅಭಿವೃದ್ಧಿಪಡಿಸಿ, ತಯಾರಿಸುತ್ತಿದೆ. ಎಂಐ–17ವಿ5 ಹೆಲಿಕಾಪ್ಟರ್, 1970ರಲ್ಲಿ ಮಾರುಕಟ್ಟೆಗೆ ಬಂದ ಎಂಐ–17 ಹೆಲಿಕಾಪ್ಟರ್‌ನ ಸುಧಾರಿತ ರೂಪ. ಈ ಸರಣಿಯ ಅತ್ಯಾಧುನಿಕ ಎಂಐ–17ವಿ5 ಹೆಲಿಕಾಪ್ಟರ್ ಅನ್ನು ಖರೀದಿಸಲು ಭಾರತವು 2008ರಲ್ಲಿ ರಷ್ಯಾ ಜತೆಗೆ ಒಪ್ಪಂದ ಮಾಡಿಕೊಂಡಿತ್ತು. ಆರಂಭದಲ್ಲಿ 80 ಹೆಲಿಕಾಪ್ಟರ್‌ಗಳನ್ನಷ್ಟೇ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ನಂತರದ ದಿನಗಳಲ್ಲಿ ಅವುಗಳ ಸಂಖ್ಯೆಯನ್ನು 151ಕ್ಕೆ ಏರಿಸಲಾಗಿತ್ತು. 2011ರ ಸೆಪ್ಟೆಂಬರ್‌ನಲ್ಲಿ ಮೊದಲ ಬ್ಯಾಚ್‌ನ ಹೆಲಿಕಾಪ್ಟರ್‌ಗಳು ದೇಶಕ್ಕೆ ಬಂದಿಳಿದವು. 2012ರಲ್ಲಿ ಇವನ್ನು ವಾಯುಪಡೆಯ ಬಳಕೆಗೆ ನಿಯೋಜನೆ ಮಾಡಲಾಯಿತು.

ಕಜಾನ್ ತಯಾರಿಕೆಯ ಎಂಐ–17ವಿ5 ಹೆಲಿಕಾಪ್ಟರ್‌ನಲ್ಲಿ ಇರುವ ಎಲ್ಲಾ ಸವಲತ್ತು ಮತ್ತು ಸಲಕರಣೆಗಳನ್ನು ಭಾರತಕ್ಕೆ ಪೂರೈಕೆಯಾದ ಹೆಲಿಕಾಪ್ಟರ್‌ಗಳಲ್ಲೂ ಉಳಿಸಿಕೊಳ್ಳಲಾಗಿತ್ತು. ಇವನ್ನು ಸಿಬ್ಬಂದಿ, ಸರಕು ಮತ್ತು ಸಾಮಗ್ರಿಗಳನ್ನು ರವಾನಿಸಲು ಉಪಯೋಗಿಸಲಾಗುತ್ತಿದೆ. ಇದರೊಂದಿಗೆ ನೆಲದ ಮೇಲಿನ ಗುರಿಯನ್ನು ಧ್ವಂಸ ಮಾಡಲು, ಗಾಯಾಳುಗಳನ್ನು ಸಾಗಿಸಲು, ಆಕಾಶ ಮಾರ್ಗದಿಂದಲೇ ಸೇನಾ ಸಿಬ್ಬಂದಿಯನ್ನು ಕೆಳಗಿಳಿಸಲು ಸೇರಿದಂತೆ ವಿಶೇಷ ಕಾರ್ಯಾಚರಣೆಗಳಲ್ಲಿ ಈ ಹೆಲಿಕಾಪ್ಟರ್‌ಗಳನ್ನು ಬಳಸಬಹುದಾಗಿದೆ.

**ತಾಂತ್ರಿಕ ವಿವರ:**

ಈ ಹೆಲಿಕಾಪ್ಟರ್ ಗಂಟೆಗೆ ಗರಿಷ್ಠ 250 ಕಿ.ಮೀ. ವೇಗದಲ್ಲಿ ಹಾರಾಟ ನಡೆಸುತ್ತದೆ. ಇದರಲ್ಲಿ ಅತ್ಯಾಧುನಿಕ ಟಿವಿ3–117ವಿಎಂ ಅವಳಿ ಎಂಜಿನ್ ಅಳವಡಿಸಲಾಗಿದೆ

13,000 ಕೆ.ಜಿ. ನಿವ್ವಳ ತೂಕವನ್ನು ಹೊತ್ತು ಸಂಚರಿಸಬಲ್ಲ ಸಾಮರ್ಥ್ಯದ್ದಾಗಿದೆ

ಶಸ್ತ್ರಸಜ್ಜಿತರಾದ 36 ಯೋಧರನ್ನು ಅಥವಾ 4,000 ಕೆ.ಜಿ.ಯಷ್ಟು ಭಾರವನ್ನು ಹೆಲಿಕಾಪ್ಟರ್ ಹೊತ್ತು ಒಯ್ಯುತ್ತದೆ

ಪಿಕೆವಿ–8 ಆಟೊಪೈಲಟ್ ವ್ಯವಸ್ಥೆ, ಮಾರ್ಗಸೂಚಿ ವ್ಯವಸ್ಥೆ ಮತ್ತು ಎಲೆಕ್ಟ್ರಾನಿಕ್ ಡಿಸ್‌ಪ್ಲೇಗಾಗಿ ಕೆಎನ್‌ಇಐ–8 ಏವಿಯಾನಿಕ್ಸ್ ಸ್ಯೂಟ್ ಅಳವಡಿಸಲಾಗಿದೆ

ಹೆಲಿಕಾಪ್ಟರ್‌ನ ಕ್ಯಾಬಿನ್ ಒಳಗೆ ಮತ್ತು ಕೆಳಗೆ ತೂಗಾಡುವ ರೀತಿಯಲ್ಲಿ ಸರಕು–ಸಾಮಗ್ರಿಗಳನ್ನು ಹೊತ್ತೊಯ್ಯುತ್ತದೆ. ಇದು, ಜಗತ್ತಿನ ಅತ್ಯಾಧುನಿಕ ಸರಕು ಸಾಗಣೆಯ ಹೆಲಿಕಾಪ್ಟರ್ ಆಗಿದೆ

ಸೇನಾ ಪಡೆಗಳ ಸಿಬ್ಬಂದಿ ರವಾನೆಗೆ, ಶಸ್ತ್ರಾಸ್ತ್ರಗಳನ್ನು ಸಾಗಿಸಲು, ಅಗ್ನಿ ಅವಘಡಗಳ ತುರ್ತು ಸಂದರ್ಭಗಳಲ್ಲಿ ರಕ್ಷಣೆಗಾಗಿ, ಭದ್ರತೆ ಮತ್ತು ಗಸ್ತು ತಿರುಗಲು ಹಾಗೂ ರಕ್ಷಣೆ ಮತ್ತು ಶೋಧ ಕಾರ್ಯಾಚರಣೆಗಳಿಗಾಗಿ ಈ ಹೆಲಿಕಾಪ್ಟರ್ ಬಳಕೆ ಮಾಡಬಹುದಾಗಿದೆ

ರಕ್ಷಣಾ ವ್ಯವಸ್ಥೆ

ಹೆಲಿಕಾಪ್ಟರ್‌ನ ಕಾಕ್‌ಪಿಟ್ ಮತ್ತು ಪ್ರಮುಖ ಸಾಧನಗಳಿಗೆ ಶಸ್ತ್ರಾಸ್ತ್ರಗಳಿಂದ ರಕ್ಷಣೆಗೆ ಕವಚದ ಸುರಕ್ಷತೆ ಇದೆ. ಹೆಲಿಕಾಪ್ಟರ್‌ಗೆ ಮೆಷಿನ್ ಗನ್ ಅಳವಡಿಸಲೂ ಅವಕಾಶವಿದೆ

ಸ್ಫೋಟದಿಂದ ರಕ್ಷಣೆ ಪಡೆಯಲು, ಇಂಧನ ಟ್ಯಾಂಕ್‌ಗಳಿಗೆ

ಪಾಲಿಯುರೇಥಿನ್ ಫೋಮ್‌ನಿಂದ ಸೀಲ್ ಮಾಡಲಾಗಿದೆ

ಹೆಲಿಕಾಪ್ಟರ್‌ನಲ್ಲಿ ಸ್ಟೋಮ್– ವಿ ಕ್ಷಿಪಣಿಗಳು, ಎಸ್–8 ರಾಕೆಟ್‌ಗಳು, ಒಂದು 23ಎಂಎಂ ಮೆಷಿನ್ ಗನ್, ಪಿಕೆಟಿ ಮೆಷಿನ್ ಗನ್‌ಗಳು, ಎಕೆಎಂ ಸಬ್–ಮೆಷಿನ್ ಗನ್‌ಗಳನ್ನು ಅಳವಡಿಸಬಹುದು. ಗನ್‌ಗಳನ್ನು ಗುರಿಯಿಡಲು ಎಂಟು ಕಡೆ ವ್ಯವಸ್ಥೆ ಇದೆ.

## ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ 'ಬ್ರಹ್ಮೋಸ್' ಪರೀಕ್ಷೆ ಯಶಸ್ವಿ




ಸ್ವದೇಶಿ ನಿರ್ಮಿತ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ 'ಬ್ರಹ್ಮೋಸ್'ನ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಯಿತು.

ಒಡಿಶಾ ಕರಾವಳಿಯ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಈ ಪರೀಕ್ಷೆ ನೆರವೇರಿತು.

## ಕೋವಿಶೀಲ್ಡ್ ಅಭಿವೃದ್ಧಿಯಲ್ಲಿ ಪ್ರಮುಖರಾದ ಡಾ. ಜಾಧವ್ ನಿಧನ



ಕೋವಿಡ್–19 ಲಸಿಕೆ ಕೋವಿಶೀಲ್ಡ್ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಸುರೇಶ್ ಜಾಧವ್ (72) ದೀರ್ಘಕಾಲ ಅನಾರೋಗ್ಯದಿಂದ ಪುಣೆಯಲ್ಲಿ ನಿಧನರಾದರು.

## ರೆಪೊ ದರ: ಯಥಾಸ್ಥಿತಿ ಮುಂದುವರಿಕೆ

ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು ಶೇಕಡ 4ರ ಮಟ್ಟದಲ್ಲಿಯೇ ಉಳಿಸಿಕೊಳ್ಳುವ ತೀರ್ಮಾನವನ್ನು ಒಕ್ಕೊರಲಿನಿಂದ ಕೈಗೊಂಡಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದರು.

ಈ ತೀರ್ಮಾನದಿಂದಾಗಿ ಗೃಹ ಸಾಲ, ವಾಹನ ಸಾಲ ಮತ್ತು ವೈಯಕ್ತಿಕ ಸಾಲದ ಮೇಲಿನ ಬಡ್ಡಿ ದರಗಳು ಇನ್ನೂ ಕೆಲವು ಸಮಯದವರೆಗೆ ಈಗಿರುವ ಮಟ್ಟದಲ್ಲಿಯೇ ಮುಂದುವರಿಯಲಿವೆ.

ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇಕಡ 8.4ರಷ್ಟು ಬೆಳವಣಿಗೆ ಸಾಧಿಸಿದೆ. ಇದು ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತಿ ವೇಗದ ಬೆಳವಣಿಗೆ. ಆದರೆ, ಕೊರೊನಾದ ಓಮೈಕ್ರಾನ್ ತಳಿಯು ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿ ಉಂಟುಮಾಡಬಲ್ಲದು ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

## ಇ.ವಿ. ನೋಂದಣಿಯಲ್ಲಿ ರಾಜ್ಯಕ್ಕೆ ಮೂರನೆಯ ಸ್ಥಾನ

ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ನೋಂದಣಿಯಲ್ಲಿ ಉತ್ತರ ಪ್ರದೇಶ, ದೆಹಲಿ ಮತ್ತು ಕರ್ನಾಟಕ ಮುಂಚೂಣಿ ಸ್ಥಾನಗಳಲ್ಲಿ ಇವೆ. ಇದುವರೆಗೆ ಒಟ್ಟು 8.70 ಲಕ್ಷ ಇ.ವಿ.ಗಳು ನೋಂದಣಿ ಆಗಿವೆ. ಉತ್ತರ ಪ್ರದೇಶದಲ್ಲಿ ಅತಿಹೆಚ್ಚು ಇ.ವಿ.ಗಳು (2.55 ಲಕ್ಷ) ನೋಂದಣಿ ಆಗಿವೆ ಎಂದು ಗಡ್ಕರಿ ತಿಳಿಸಿದ್ದಾರೆ. ದೆಹಲಿಯಲ್ಲಿ 1.25 ಲಕ್ಷ ಹಾಗೂ ಕರ್ನಾಟಕದಲ್ಲಿ 72 ಸಾವಿರ ಇ.ವಿ.ಗಳು ನೋಂದಣಿ ಆಗಿವೆ.

## ಪ್ರೊ ಕಬಡ್ಡಿಗೆ ಹೊಸ ಘೋಷವಾಕ್ಯ

ಎರಡು ವರ್ಷಗಳ ಬಳಿಕ ಪ್ರೊ ಕಬಡ್ಡಿ ಮತ್ತೆ ಆರಂಭವಾಗಲಿದೆ. December 22ರಿಂದ ನಡೆಯಲಿರುವ ಟೂರ್ನಿಯ ಘೋಷವಾಕ್ಯ **'ಜೋ ಭಿಡೆಗಾ ವೊ ಬಡೇಗಾ'** ಆಗಿದೆ.




ಇದರ ಪ್ರಚಾರ ಜಾಹೀರಾತಿನ'ಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಕಾಣಿಸಿಕೊಂಡಿದ್ದಾರೆ.

## ತನಿಖೆಗೆ ಏರ್‌ಮಾರ್ಷಲ್ ನೇತೃತ್ವ

ತಮಿಳುನಾಡಿನ ಕೂನೂರು ಸಮೀಪ ಸೇನಾ ಹೆಲಿಕಾಪ್ಟರ್ ಪತನಗೊಂಡ ಪ್ರಕರಣದ ತನಿಖೆಯನ್ನು ಮೂರೂ ಸೇನೆಗಳ ಸದಸ್ಯರು ಇರುವ ಸಮಿತಿ ನಡೆಸಲಿದೆ. ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ಅವರು ತನಿಖೆಯ ನೇತೃತ್ವ ವಹಿಸಲಿದ್ದಾರೆ.

## ಎಲ್‌ಎಲ್‌ಸಿಗೆ ಅಮಿತಾಭ್ ರಾಯಭಾರಿ



ನಟ ಅಮಿತಾಬ್ ಬಚ್ಚನ್ ನಿವೃತ್ತ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರನ್ನೊಳಗೊಂಡ ಲೆಜೆಂಡ್ಸ್ ಲೀಗ್ ಕ್ರಿಕೆಟ್‌ನ ರಾಯಭಾ–ರಿಯಾಗಿದ್ದಾರೆ. ಲೀಗ್ ಬಗ್ಗೆ ಪ್ರತಿಕ್ರಿಯಿಸಿರುವ ಅಮಿತಾಬ್ 'ಹಳೆಯ ನೆನಪುಗಳನ್ನು ಮೆಲುಕು ಹಾಕಲು ಇದು ಉತ್ತಮ ವೇದಿಕೆಯಾಗಲಿದ್ದು ಪಂದ್ಯಗಳನ್ನು ವೀಕ್ಷಿಸಲು ಕಾತರನಾಗಿದ್ದೇನೆ' ಎಂದಿದ್ದಾರೆ.

## ವಾಣಿವಿಲಾಸಕ್ಕೆ ದಾಖಲೆಯ ನೀರು

ವೇದಾವತಿ ನದಿ 64 ವರ್ಷಗಳ ನಂತರ ಮೈದುಂಬಿ ಹರಿದ ಪರಿಣಾಮ ತಾಲ್ಲೂಕಿನ ವಾಣಿವಿಲಾಸ ಜಲಾಶಯದ ನೀರಿನ ಮಟ್ಟ 125 ಅಡಿ ತಲುಪಿದೆ.



ಭದ್ರಾ ಮೇಲ್ದಂಡೆ ಯೋಜನೆ ಹಾಗೂ ವರುಣನ ಕೃಪೆಯಿಂದಲೂ ಜಲಾಶಯದ ನೀರಿನಮಟ್ಟ 125 ಅಡಿ ದಾಟಿದೆ. ಜಲಾಶಯದ ಭರ್ತಿಗೆ ಕೇವಲ 5 ಅಡಿ ನೀರು ಬೇಕಿದೆ.

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಯಲ್ಲಿ ಜನಿಸಿರುವ ವೇದಾ ನದಿಗೆ ಸಖರಾಯಪಟ್ಟಣದ ಸಮೀಪದಲ್ಲಿ ಕೆರೆ ನಿರ್ಮಿಸಲಾಗಿದೆ. ಆವತಿ ನದಿಗೆ ಮದ ಗದಕೆರೆ ನಿರ್ಮಿಸಲಾಗಿದೆ. ಈ ಎರಡೂ ಕೆರೆಗಳು ಕೋಡಿಬಿದ್ದ ನಂತರ ಕಡೂರು ತಾಲ್ಲೂಕಿನ ದೇವ ನೂರಿನ ಸಮೀಪ ಸಂಗಮವಾಗಿ 'ವೇದಾವತಿ'ಯಾಗಿ ಹರಿದುಬರುತ್ತದೆ. ನದಿಗೆ ಅಡ್ಡಲಾಗಿ ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಸಮೀಪ ಅಣೆಕಟ್ಟೆ ನಿರ್ಮಾಣ ಮಾಡಲಾಗಿದೆ. ಬಯಲುಸೀಮೆಯ ಜನರ ನೀರಿನ ಬೇಗೆಯನ್ನು ನೀಗಿಸಲು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ತಾಯಿ ಕೆಂಪನಂಜಮ್ಮಣ್ಣಿ ಹೆಸರಿನಲ್ಲಿ ಕಟ್ಟಿಸಿರುವ ವಾಣಿವಿಲಾಸ ಜಲಾಶಯ ಇದಾಗಿದೆ.

## ಗೋಧಿ ಹುಗ್ಗಿಗೆ ಮಾನ್ಯತೆ

ಉತ್ತರ ಕರ್ನಾಟಕದ ಪ್ರಸಿದ್ಧ ಸಿಹಿ ತಿನಿಸು ಗೋಧಿ ಹುಗ್ಗಿಗೆ ಕೇಂದ್ರ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಸಮಿತಿ ಕೇಂದ್ರ ಆಹಾರ ತಂತ್ರಜ್ಞಾನಗಳ ಸಂಶೋಧನಾ ಸಂಸ್ಥೆಯ ಮಾನ್ಯತೆ ದೊರೆತಿದೆ.

## 'ಕೇರ್ ಫಾರ್ ಹಾಕಿ'ಗೆ ರಾಣಿ ರಾಯಭಾರಿ



ಭಾರತದ ಖಾಸಗಿ ಸಾಮಾನ್ಯ ವಿಮಾ ಕಂಪನಿಗಳಲ್ಲಿ ಒಂದಾಗಿರುವ ಬಜಾಜ್ ಅಲಯನ್ಸ್ 'ಕೇರ್ ಫಾರ್ ಹಾಕಿ' ಅಭಿಯಾನಕ್ಕೆ ಚಾಲನೆ ನೀಡಿದೆ. ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಈ ಅಭಿಯಾನದ ರಾಯಭಾರಿಯಾಗಿದ್ದಾರೆ.

## ಕೋವಿಡ್ ಲಸಿಕೆ: ಮೊದಲ ಸ್ಥಾನದಲ್ಲಿ ಕರ್ನಾಟಕ

'ದೇಶದಲ್ಲಿ ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ಶೇ 94.38 ರಷ್ಟು ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

## ರಿಲಯನ್ಸ್, ಟಿಸಿಎಸ್ ದೇಶದ ಮುಂಚೂಣಿ ಕಂಪನಿಗಳು

ಹುರೂನ್ ಇಂಡಿಯಾ ಮತ್ತು ಎಕ್ಸಿಸ್ ಬ್ಯಾಂಕ್‌ನ ಬುಗುಂಡಿ ಪ್ರೈವೇಟ್ ಜೊತೆಯಾಗಿ ಭಾರತದ ಮುಂಚೂಣಿ 500 ಕಂಪನಿಗಳ ಪಟ್ಟಿಯನ್ನು ಸಿದ್ಧಪಡಿಸಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಮೊದಲ ಸ್ಥಾನದಲ್ಲಿ ಇದೆ. ಈ ಪಟ್ಟಿಯಲ್ಲಿ ಇರುವ 53 ಕಂಪನಿಗಳು ಕರ್ನಾಟಕದಲ್ಲಿ ತಮ್ಮ ಮುಖ್ಯ ಕಚೇರಿಯನ್ನು ಹೊಂದಿವೆ.

**ದೇಶದ ಟಾಪ್10 ಕಂಪನಿಗಳು**

| ಸ್ಥಾನ | ಕಂಪನಿ | ಮೌಲ್ಯ (ಲಕ್ಷ ಕೋಟಿಯಲ್ಲಿ) | ಸಿಇಒ/ಎಂ.ಡಿ. |
|---|---|---|---|
| 1 | ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ | ₹16.65 | ಮುಕೇಶ್ ಅಂಬಾನಿ |
| 2 | ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ | ₹13.09 | ರಾಜೇಶ್ ಗೋಪಿನಾಥನ್ |
| 3 | ಎಚ್‌ಡಿಎಫ್‌ಸಿ ಬ್ಯಾಂಕ್ | ₹9.05 | ಶಶಿಧರ್ ಜಗದೀಶನ್ |
| 4 | ಇನ್ಫೊಸಿಸ್ | ₹7.51 | ಸಲೀಲ್ ಪಾರೇಖ್ |
| 5 | ಐಸಿಐಸಿಐ ಬ್ಯಾಂಕ್ | ₹5.37 | ಸಂದೀಪ್ ಬಕ್ಷಿ |
| 6 | ಎಚ್‌ಡಿಎಫ್‌ಸಿ | ₹5.01 | ಕೆಕಿ ಎಂ. ಮಿಸ್ತ್ರಿ |
| 7 | ಬಜಾಜ್ ಫೈನಾನ್ಸ್ | ₹4.31 | ಸಂಜೀವ್ ಬಜಾಜ್ |
| 8 | ಕೋಟಕ್ ಮಹೀಂದ್ರ ಬ್ಯಾಂಕ್ | ₹4.17 | ಉದಯ್ ಕೋಟಕ್ |
| 9 | ಭಾರ್ತಿ ಏರ್‌ಟೆಲ್ | ₹3.85 | ಗೋಪಾಲ್ ವಿಟ್ಟಲ್ |
| 10 | ವಿಪ್ರೊ | ₹3.67 | ಥಿಯರಿ ಡೆಲಾಪೋರ್ಟ್ |

**ಕರ್ನಾಟಕದ ಟಾಪ್10 ಕಂಪನಿಗಳು**

| ಸ್ಥಾನ | ಕಂಪನಿ | ಮೌಲ್ಯ | | ಸಿಇಒ/ಎಂ.ಡಿ. |
|---|---|---|---|---|
| 1 | ಇನ್ಫೊಸಿಸ್ | ₹7.51 | ಲಕ್ಷ ಕೋಟಿ | ಸಲೀಲ್ ಪಾರೇಖ್ |
| 2 | ವಿಪ್ರೊ | ₹3.67 | ಲಕ್ಷ ಕೋಟಿ | ಥಿಯರಿ ಡೆಲಾಪೋರ್ಟ್ |
| 3 | ಬೈಜುಸ್ | ₹1.35 | ಲಕ್ಷ ಕೋಟಿ | ಬೈಜು ರವೀಂದ್ರನ್ |
| 4 | ಇನ್‌ಮೊಬಿ | ₹90,000 | ಕೋಟಿ | ನವೀನ್ ತಿವಾರಿ |
| 5 | ಮೈಂಡ್‌ಟ್ರೀ | ₹75,468 | ಕೋಟಿ | ದೇವಶಿಶ್ ಚಟರ್ಜಿ |
| 6 | ಪೇಜ್ ಇಂಡಸ್ಟ್ರೀಸ್ | ₹41,963 | ಕೋಟಿ | ಗಣೇಶ್ ವಿ.ಎಸ್. |
| 7 | ಸ್ವಿಗ್ಗಿ | ₹41,250 | ಕೋಟಿ | ಶ್ರೀಹರ್ಷ ಮಜೆಟಿ |
| 8 | ಬಯೋಕಾನ್ | ₹40,524 | ಕೋಟಿ | ಸಿದ್ಧಾರ್ಥ ಮಿತ್ತಲ್ |
| 9 | ಓಲಾ ಎಲೆಕ್ಟ್ರಿಕ್ | ₹37,500 | ಕೋಟಿ | ಭವೀಶ್ ಅಗರ್ವಾಲ್ |
| 10 | ಮೀಶೊ | ₹36,750 | ಕೋಟಿ | ವಿದಿತ್ ಆತ್ರೇಯ |

## 'ಸುಭಾಷ್ ಅಡಿ ಸಮಿತಿ ರದ್ದುಗೊಳಿಸಿ'

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಸಂಬಂಧಿಸಿದಂತೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನೀಡುವ ವರದಿಯೇ ಅಂತಿಮ ಆಗುವುದರಿಂದ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿಯನ್ನು ರದ್ದುಗೊಳಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಲು ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

## ಮುಂದಿನ ವರ್ಷ ಮಾನವರಹಿತ ಬಾಹ್ಯಾಕಾಶ ಯಾನ

2022ರ ಅಂತ್ಯದ ವೇಳೆಗೆ ಭಾರತವು ಎರಡು ಮಾನವರಹಿತ ಬಾಹ್ಯಾಕಾಶ ಯಾನ ಯೋಜನೆಗಳನ್ನು ಹಮ್ಮಿಕೊಳ್ಳಲಿದೆ' ಎಂದು ಬಾಹ್ಯಾಕಾಶ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಬಾಹ್ಯಾಕಾಶ ಯೋಜನೆಗಳ ಬಗ್ಗೆ ರಾಜ್ಯಸಭೆಯಲ್ಲಿ ಮಾಹಿತಿ ನೀಡಿದ ಅವರು, 2022ರ ವೇಳೆಗೆ ಶುಕ್ರಗ್ರಹದ ಬಳಿಗೆ ಹಾಗೂ 2022–23ರ ವೇಳೆಗೆ ಸೂರ್ಯನ ಕುರಿತು ಅಧ್ಯಯನ ನಡೆಸಲು ಬಾಹ್ಯಾಕಾಶ ನೌಕೆಗಳನ್ನು ಕಳುಹಿಸುವ ಯೋಜನೆಗಳನ್ನು ಹಮ್ಮಿಕೊಳ್ಳುವ ಚಿಂತನೆ ನಡೆಸಲಾಗಿದೆ ಎಂದಿದ್ದಾರೆ.

## CBI, ED ಮಸೂದೆಗೆ ಅಂಗೀಕಾರ

ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕರ ಅಧಿಕಾರಾವಧಿಯನ್ನು ಎರಡು ವರ್ಷಗಳಿಂದ ಗರಿಷ್ಠ ಐದು ವರ್ಷಗಳವರೆಗೆ ವಿಸ್ತರಿಸುವ ಎರಡು ಮಸೂದೆಗಳನ್ನು ಲೋಕಸಭೆಯಲ್ಲಿ ಧ್ವನಿ ಮತದಿಂದ ಅಂಗೀಕರಿಸಲಾಯಿತು.

## ₹30 ಕೋಟಿ ವೆಚ್ಚದಲ್ಲಿ ತುಂಗಾ ಆರತಿ ಮಂಟಪ: ಬೊಮ್ಮಾಯಿ

ಕಾಶಿಯಲ್ಲಿ ಗಂಗಾ ಆರತಿ ಆಯೋಜಿಸುವ ಮಾದರಿಯಲ್ಲೇ ದಾವಣಗೆರೆಯ ಹರಿಹರದಲ್ಲಿ ತುಂಗಾ ಆರತಿ ನಡೆಸಲು ₹ 30 ಕೋಟಿ ವೆಚ್ಚದಲ್ಲಿ ಮಂಟಪಗಳನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

## ಸಿಡಿಎಸ್ ಹುದ್ದೆಗೆ ಜ. ನರವಣೆ



ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಹುದ್ದೆಗೆ ನೇಮಕ ಪ್ರಕ್ರಿಯೆಯನ್ನು ಸರ್ಕಾರವು ತಕ್ಷಣವೇ ಆರಂಭಿಸಲಿದೆ. ಭೂಸೇನೆಯ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರೇ ಈ ಹುದ್ದೆಗೆ ಏರುವ ಸಾಧ್ಯತೆ ಹೆಚ್ಚು ಎನ್ನಲಾಗಿದೆ. ಸಿಡಿಎಸ್ ಆಗಿದ್ದ ಜ. ಬಿಪಿನ್ ರಾವತ್ ಅವರು ಹೆಲಿಕಾಪ್ಟರ್ ಪತನದಲ್ಲಿ ಮೃತರಾದ ಕಾರಣ ಹುದ್ದೆ ಖಾಲಿ ಆಗಿದೆ.

ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ ಹಿರಿಯ ಕಮಾಂಡರ್‌ಗಳಿರುವ ಸಮಿತಿಯನ್ನು ಸರ್ಕಾರ ರಚಿಸಲಿದೆ. ಈ ಸಮಿತಿಯು ಮೂರು ದಿನಗಳಲ್ಲಿ ತನ್ನ ಶಿಫಾರಸುಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಸಲ್ಲಿಸಲಿದೆ.


ಮೂರು ಭದ್ರತಾ ಪಡೆಗಳ ನಡುವೆ ಸಮನ್ವಯ ಸಾಧಿಸುವುದು ಸೇರಿದಂತೆ ಜನರಲ್ ಬಿಪಿನ್ ರಾವತ್ ಅವರು ಪೂರ್ಣಗೊಳಿಸದೇ ಬಾಕಿ ಉಳಿಸಿರುವ ಕೆಲಸಗಳನ್ನು ಹೊಸದಾಗಿ ನೇಮಕವಾಗಲಿರುವ ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಮುಂದುವರಿಸಬೇಕಿದೆ.

ಪ್ರಸ್ತಾವಿತ ಸೇನಾ ಸುಧಾರಣೆ, ಎಲ್ಲರನ್ನೂ ಜತೆಗೆ ತೆಗೆದುಕೊಂಡು ಹೋಗುವ ಪ್ರಕ್ರಿಯೆ ಹಾಗೂ ಯಾವುದೇ ವಿವಾದಕ್ಕೆ ಅವಕಾಶ ಮಾಡಿಕೊಡದಂತೆ ನೂತನ ಸಿಡಿಎಸ್ ಕೆಲಸ ಮಾಡಬೇಕು ಎಂಬುದು ಸರ್ಕಾರದ ಬಯಕೆಯಾಗಿದೆ

## 'ವಾಯುಮಾಲಿನ್ಯ ತಡೆಗೆ ತುರ್ತುಕ್ರಮ'

'ತುರ್ತು ಸಂದರ್ಭಗಳಿಗೆ ತುರ್ತು ಕ್ರಮ ಅಗತ್ಯ' ಎಂದಿರುವ ಸುಪ್ರೀಂ ಕೋರ್ಟ್, ರಾಜ ಧಾನಿಯಲ್ಲಿ ವಾಯುಮಾಲಿನ್ಯ ತಡೆಗೆ ಕೈಗೊಂಡಿರುವ ಸ್ಪಷ್ಟ ಕ್ರಮಗಳ ಬಗ್ಗೆ 24 ಗಂಟೆಯಲ್ಲಿ ಮಾಹಿತಿ ನೀಡಬೇಕು' ಎಂದು ಕೇಂದ್ರ ಮತ್ತು ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

## ರಾಜ್ಯದಲ್ಲಿ ಓಮೈಕ್ರಾನ್ ಪತ್ತೆ



ಜಗತ್ತಿನ ಕೆಲವು ರಾಷ್ಟ್ರಗಳಲ್ಲಿ ಕಾಣಿಸಿಕೊಂಡಿದ್ದ ಕೊರೊನಾದ ರೂಪಾಂತರ ತಳಿ 'ಓಮೈಕ್ರಾನ್' ಈಗ ಬೆಂಗಳೂರಿನ ಮೂಲಕ ಭಾರತಕ್ಕೂ ಕಾಲಿಟ್ಟಿದೆ. ಈ ವೈರಾಣು ದೃಢಪಟ್ಟ ಮೊದಲ ಎರಡು ಪ್ರಕರಣಗಳು ನಗರದಲ್ಲಿ ಪತ್ತೆಯಾಗಿವೆ.

ಓಮೈಕ್ರಾನ್ ಸೋಂಕಿತರ ರೋಗ ಲಕ್ಷಣಗಳು ಲಘು ಪ್ರಮಾಣದ್ದಾಗಿದ್ದು, ಯಾರೂ ಆತಂಕಕ್ಕೆ ಒಳಗಾಗಬೇ ಕಾಗಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು. 'ಡೆಲ್ಟಾ ವೈರಾಣು ತೀವ್ರ ಸ್ವರೂಪದ್ದಾಗಿತ್ತು. ಅದಕ್ಕೆ ಹೋಲಿಸಿದಾಗ ಇದು ಗಂಭೀರ ಸ್ವರೂಪದ್ದಾಗಿ ಕಾಣುತ್ತಿಲ್ಲ.

## ಕಂದಾಯ ಇಲಾಖೆ ಸೇವೆ ಆಪ್‌ನಲ್ಲಿ

ಕಂದಾಯ ಇಲಾಖೆಯ ಎಲ್ಲಾ ಸೇವೆಗಳನ್ನು ಮೊಬೈಲ್ ಆಪ್ ಮೂಲಕ ನೀಡಬೇಕು ಮತ್ತು ಇಲಾಖೆಯ ವಿವಿಧ ಸೇವೆಗಳ ಅರ್ಜಿ ಶುಲ್ಕವನ್ನು ನಗದು ಪಾವತಿಯ ಬದಲಿಗೆ ಡಿಜಿಟಲ್ ಪಾವತಿಗೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಕಂದಾಯ ಇಲಾಖೆ ಕುರಿತ ವರದಿಯಲ್ಲಿ ಶಿಫಾರಸ್ಸು ಮಾಡಿದೆ.

ಬಳಕೆದಾರರಿಗೆ ಅನುಕೂಲವಾಗುವಂತೆ ಕಂದಾಯ ಇಲಾಖೆಯ ಎಲ್ಲಾ ಸೇವೆಗಳನ್ನು ಬಳಕೆದಾರರಿಗೆ ಮೊಬೈಲ್ ಆಪ್ ಮೂಲಕ ಲಭ್ಯವಾಗುವಂತೆ ಕ್ರಮ ವಹಿಸಬೇಕು. ಈ ಸಂಬಂಧ ಇ–ಆಡಳಿತ ಇಲಾಖೆಯು ಮೊಬೈಲ್ ಆಪ್ ಅನ್ನು ಪುನರಾಭಿವೃದ್ಧಿಗೊಳಿಸಬೇಕು ಎಂದು ಹೇಳಿದೆ.

**ಪ್ರಮುಖ ಶಿಫಾರಸ್ಸುಗಳು:**

ಬೆಂಗಳೂರು ಒನ್ ರೀತಿಯಲ್ಲೇ ನಾಗರಿಕರಿಗೆ ಸುಲಭವಾಗಿ ಸೇವೆ ಒದಗಿಸಲು 'ಗ್ರಾಮ ಒನ್' ವ್ಯವಸ್ಥೆಯನ್ನು ಕಲ್ಪಿಸಬೇಕು. ಇದಕ್ಕೆ ಸಂಬಂಧಿಸಿದಂತೆ ನಿರ್ವಾಹಕರು ಅಥವಾ ದತ್ತಾಂಶ ನಮೂದಿಸುವ ಆಪರೇಟರ್‌ಗಳಿಗೆ ತರಬೇತಿ ನೀಡಬೇಕು.

ಅಟಲ್‌ಜೀ ಸ್ನೇಹಿ ಕೇಂದ್ರಗಳಲ್ಲಿ (ಎಜೆಎಸ್‌ಕೆ) ನಾಗರಿಕ–ರಿಗಾಗಿ ಏಕಗವಾಕ್ಷಿ ಸೇವಾ ಸೌಲಭ್ಯ ನೀಡಬೇಕು. ಎಲ್ಲಾ ಸರ್ಕಾರಿ ನಾಗರಿಕ ಆನ್‌ಲೈನ್ ಸೇವೆಗಳನ್ನು ಎಜೆಎಸ್‌ಕೆ ಕೇಂದ್ರಗಳಲ್ಲಿ ಒದಗಿಸಲು ತಗಲುವ ವೆಚ್ಚಕ್ಕೆ ಅರ್ಜಿದಾರರಿಗೆ ₹25 ಶುಲ್ಕ ವಿಧಿಸಬಹುದು. ಈಗಾಗಲೇ ಬಳಕೆದಾರರ ಶುಲ್ಕ ₹25 ಇದೆ. ಇದರಿಂದ ₹50 ಆಗಲಿದೆ.

ಕಂದಾಯ ಇಲಾಖೆಯ ಎಲ್ಲ ಪ್ರಮಾಣ ಪತ್ರಗಳ ವಿತರಣೆಗಾಗಿ 'ಇ–ಕ್ಷಣ' ವ್ಯವಸ್ಥೆಯನ್ನು ಜಾರಿಗೊಳಿಸಿ, ಇ–ಕ್ಷಣವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು.

ಟಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ಪಿಂಚಣಿ ಸೇವೆಗಳನ್ನೂ 'ನವೋದಯ' ಆಪ್ ಅಡಿ ತರಬೇಕು. ನಂತರ ವಿವಿಧ ಇಲಾಖೆಗಳ ಎಲ್ಲಾ ಪಿಂಚಣಿ ಯೋಜನೆಗಳನ್ನು (ಕಂದಾಯೇತರ ಸೇರಿ) ನವೋದಯ ಆಪ್ ಅಡಿ ತರಲು ಕ್ರಮಕೈಗೊಳ್ಳಬೇಕು.

## ಜಿಡಿಪಿ ಶೇ 8.4ರಷ್ಟು ಬೆಳವಣಿಗೆ

ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ವೃದ್ಧಿ ದರವು (ಜಿಡಿಪಿ) ಶೇ 8.4ರಷ್ಟು ಬೆಳವಣಿಗೆ ಕಂಡಿದ್ದು, ಕೋವಿಡ್‌ಗೂ ಮುಂಚಿನ ಮಟ್ಟವನ್ನು ದಾಟಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಶೇ 20.1ರಷ್ಟು ಬೆಳವಣಿಗೆ ಕಂಡಿತ್ತು. ಇದಕ್ಕೆ ಹೋಲಿಸಿದರೆ ಎರಡನೇ ತ್ರೈಮಾಸಿಕದಲ್ಲಿ ಬೆಳವಣಿಗೆಯು ಇಳಿಕೆ ಆಗಿದೆ. ಆದ–ರೆ, ಹೋಲಿಕೆಯ ಮಟ್ಟವಾದ ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಭಾರಿ ಕುಸಿತ (ಶೇ 7.4) ಕಂಡಿದ್ದು ಕೂಡ, ಈ ತ್ರೈಮಾಸಿಕದಲ್ಲಿ ಬೆಳವಣಿಗೆ ದರ ಇಷ್ಟಿರುವುದಕ್ಕೆ ಒಂದು ಕಾರಣ. ಕೋವಿಡ್ ನಿಯಂತ್ರಿಸಲು ಕೇಂದ್ರ ಸರ್ಕಾರವು ಕಳೆದ ವರ್ಷ ದೇಶದಾದ್ಯಂತ ಲಾಕ್‌ಡೌನ್ ಹೇರಿದ್ದರಿಂದ ಜಿಡಿಪಿ ಬೆಳವಣಿಗೆ ನಕಾರಾತ್ಮಕ ಮಟ್ಟ ತಲುಪಿತ್ತು.


ಆರ್ಥಿಕ ಚಟುವಟಿಕೆಗಳು ಸಹಜ ಸ್ಥಿತಿಯತ್ತ ಮರಳುತ್ತಿದ್ದು, ಸತತ ನಾಲ್ಕನೇ ತ್ರೈಮಾಸಿಕದಲ್ಲಿಯೂ ಜಿಡಿಪಿ ಸಕಾರಾತ್ಮಕ ಬೆಳವಣಿಗೆ ಕಂಡಂತಾಗಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್ ಅವಧಿ) ಜಿಡಿಪಿಯು ಶೇ 13.7ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ –15.9ರಷ್ಟು ಇಳಿಕೆ ಕಂಡಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇ–ರಿಯು (ಎನ್‌ಎಸ್‌ಒ) ಮಾಹಿತಿ ನೀಡಿದೆ.

ಎರಡಂಕಿ ಪ್ರಗತಿ ನಿರೀಕ್ಷೆ: ಸಿಇಎ

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕತೆಯು ಎರಡಂಕಿ ಪ್ರಗತಿ ಸಾಧಿಸುವ ನಿರೀಕ್ಷೆ ಮಾಡಲಾಗಿದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ (ಸಿಇಎ) ಕೆ.ವಿ. ಸುಬ್ರಮಣಿಯನ್ ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಜಿಡಿಪಿ ಶೇ 13.7ರಷ್ಟು ಬೆಳವಣಿಗೆ ಕಂಡಿದೆ.

## ಮೆಸ್ಸಿಗೆ ದಾಖಲೆ ಏಳನೇ ಬಾರಿ 'ಬ್ಯಾಲನ್ ಡಿ ಒರ್'



ಅರ್ಜೆಂಟೀನಾ ಫುಟ್‌ಬಾಲ್ ಲಯೊನೆಲ್ ಮೆಸ್ಸಿ ಅವರು ದಾಖಲೆಯ ಏಳನೇ ಬಾರಿ ಪ್ರತಿಷ್ಠಿತ ಬಾಲನ್ ಡಿ ಒರ್ ಪ್ರಶಸ್ತಿ ಮುಡಿಗೇ–ರಿಸಿಕೊಂಡಿದ್ದಾರೆ.

ಫ್ರಾನ್ಸ್ ಫುಟ್‌ಬಾಲ್ ನಿಯತಕಾಲಿಕೆ ನೀಡುವ ಬ್ಯಾಲನ್ ಡಿ ಒರ್ ಪ್ರಶಸ್ತಿಯನ್ನು ಮೆಸ್ಸಿ 2009, 2010, 2011, 2012, 2015 ಮತ್ತು 2019ರಲ್ಲಿ ಗೆದ್ದುಕೊಂಡಿದ್ದರು.


ಅಲೆಕ್ಸಿಯಾಗೆ ಗರಿ: ಮಹಿಳೆಯರ ವಿಭಾಗದಲ್ಲಿ ಸ್ಪೇನ್‌ನ ಅಲೆಕ್ಸಿಯಾ ಪುಟೆಲ್ಲಾ ಅವರು ಬ್ಯಾಲನ್ ಡಿ ಒರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಮಕ್ಕಳು, ಬಾಲಕಿಯರು, ಮಹಿಳೆಯರಿಗೆ ತೊಂದರೆ ಬೆಂಬಿಡದ ರಕ್ತಹೀನತೆ

ರಕ್ತದಲ್ಲಿ ಹಿಮೋಗ್ಲೋಬಿನ್ (ಬಿಳಿ ರಕ್ತ ಕಣ) ಅಂಶ ಕಡಿಮೆ ಆಗುವುದನ್ನು ರಕ್ತಹೀನತೆ (ಅನೀಮಿಯಾ) ಎನ್ನುತ್ತಾರೆ. ಕಬ್ಬಿಣದ ಅಂಶ ಕೊರತೆಯನ್ನು ಇದು ಸೂಚಿಸುತ್ತದೆ. ರಕ್ತಹೀನತೆಯು ಹೆರಿಗೆ ವೇಳೆ ತಾಯಿಯ ಮರಣ, ಮಕ್ಕಳ ಅವಧಿಪೂರ್ವ ಜನನ, ಕಡಿಮೆ ತೂಕ ಮೊದಲಾದ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಕರ್ನಾಟಕದಲ್ಲಿ ರಕ್ತಹೀನತೆಯು ಅತಿದೊಡ್ಡ ಆರೋಗ್ಯ ಸಮಸ್ಯೆಗಳಲ್ಲಿ ಒಂದಾಗಿದ್ದು, ಮಕ್ಕಳು ಹಾಗೂ ಮಹಿಳೆಯರನ್ನು ಕಾಡುತ್ತಿದೆ.

ರಾಜ್ಯದ ಶೇ 48ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿ ಅಭಿಪ್ರಾಯಪಟ್ಟಿದೆ. ಈ ಪೈಕಿ ಶೇ 22ರಷ್ಟು ಮಹಿಳೆಯರು ಕಡಿಮೆ ಪ್ರಮಾಣ, ಶೇ 23ರಷ್ಟು ಮಹಿಳೆಯರ ಮಧ್ಯಮ ಪ್ರಮಾಣ ಹಾಗೂ ಶೇ 3ರಷ್ಟು ಮಹಿಳೆಯರು ತೀವ್ರ ಸ್ವರೂಪದ ರಕ್ತಹೀನತೆ ಎದುರಿಸುತ್ತಿದ್ದಾರೆ. ಗ್ರಾಮೀಣ ಭಾಗದ ಮಹಿಳೆಯರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯರಲ್ಲಿ ರಕ್ತಹೀನತೆ ಪ್ರಮಾಣ ಅಧಿಕವಾಗಿದೆ. ಎಲ್ಲ ವಯೋಮಾನದ ಮಹಿಳೆಯರಲ್ಲಿ ಐದನೇ ಎರಡರಷ್ಟು ಮಂದಿಗೆ, ಎಲ್ಲ ವಯೋಮಾನದ ಪುರುಷರಲ್ಲಿ ಐದನೇ ಒಂದರಷ್ಟು ಮಂದಿಗೆ ರಕ್ತಹೀನತೆ ಸಮಸ್ಯೆಯಿದೆ ಎಂದು ವರದಿ ಹೇಳಿದೆ. 15ರಿಂದ 19 ವರ್ಷದೊಳಗಿನ ಬಾಲಕರಿಗೆ (ಶೇ 26.5) ಹೋಲಿಸಿದರೆ, ಬಾಲಕಿಯರಲ್ಲಿ (49.4) ರಕ್ತಹೀನತೆ ಪ್ರಮಾಣ ಸರಿಸುಮಾರು ಒಂದು ಪಟ್ಟು ಅಧಿಕವಾಗಿದೆ. ಗರ್ಭಿಣಿಯರು ಹಾಗೂ ಗರ್ಭಿಣಿ ಅಲ್ಲದವರನ್ನೂ ಇದು ಸಮಾನವಾಗಿ ಕಾಡುತ್ತಿದೆ. ನಗರದ ಗರ್ಭಿಣಿಯರಿಗಿಂತ (ಶೇ 37.3) ಗ್ರಾಮೀಣ ಭಾಗದ ಗರ್ಭಿಣಿಯರು (ಶೇ 50.3) ಹೆಚ್ಚು ಅಪಾಯ ಎದುರಿಸುತ್ತಿದ್ದಾರೆ.

6ರಿಂದ 59 ತಿಂಗಳು ವಯೋಮಾನದ ಮೂರನೇ ಎರಡರಷ್ಟು ಮಕ್ಕಳಲ್ಲಿ (ಶೇ 66) ರಕ್ತಹೀನತೆ ಕಂಡುಬಂದಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ವಯೋಮಾನದ ಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ ಏರಿಕೆಯಾಗಿದೆ. 2015–16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯಲ್ಲಿ ಶೇ 61ರಷ್ಟಿದ್ದ ರಕ್ತಹೀನತೆಯು, 2019–20ರ ವರದಿಯ ಪ್ರಕಾರ, 66ಕ್ಕೆ ಹೆಚ್ಚಳವಾಗಿದೆ.



## 30 ಲಕ್ಷ ಮಂದಿಗೆ 3ನೇ ಡೋಸ್

ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ರಾಜ್ಯದಲ್ಲೂ ಕಾಣಿಸಿಕೊಂಡಿದ್ದರಿಂದ ಬೂಸ್ಟರ್ ಡೋಸ್ ವಿತರಣೆಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಲಸಿಕೆಯ ಎರಡೂ ಡೋಸ್ ಪಡೆದ ಆರು ತಿಂಗಳವರೆಗೆ ಪ್ರತಿಕಾಯ (ಆಂಟಿಬಾಡಿ) ಸಕ್ರಿಯವಾಗಿರಲಿದೆ ಎನ್ನುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಆ ಬಳಿಕ ಕೆಲವರಲ್ಲಿ ಪ್ರತಿಕಾಯ ದುರ್ಬಲವಾಗುವುದರಿಂದ ಬೂಸ್ಟರ್ ಡೋಸ್ ನೀಡುವ ಅಗತ್ಯದ ಬಗ್ಗೆ ವೈದ್ಯಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಹೊಸ ತಳಿಯ ವೈರಾಣುವಿನ ಹರಡುವಿಕೆಯನ್ನು ಹಾಗೂ ರೋಗ ಉಲ್ಬಣಗೊಳ್ಳುವುದನ್ನು ತಡೆಯಲು ಮೂರನೇ ಡೋಸ್ ನೀಡಲು ಸರ್ಕಾರಕ್ಕೆ ತಜ್ಞರು ಸಲಹೆ ನೀಡಿದ್ದಾರೆ.

## ಹರ್ನಾಜ್ ಕೌರ್ ಸಂಧು 'ಭುವನ ಸುಂದರಿ'



ಭಾರತದ ನಟಿ ಹಾಗೂ ರೂಪದರ್ಶಿ ಹರ್ನಾಜ್ ಕೌರ್ ಸಂಧು ಅವರು 'ಭುವನ ಸುಂದರಿ' ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ.

21 ವರ್ಷಗಳ ನಂತರ ಭಾರತಕ್ಕೆ 'ಭುವನ ಸುಂದರಿ' ಪಟ್ಟ ಒಲಿದಂತಾಗಿದೆ. ಈ ಹಿಂದೆ ನಟಿಯರಾದ ಸುಷ್ಮಿತಾ ಸೇನ್ (1994) ಹಾಗೂ ಲಾರಾ ದತ್ತಾ (2000) ಅವರು ಈ ಗೌರವಕ್ಕೆ ಭಾಜನರಾಗಿದ್ದರು.

ಪರಾಗ್ವೆಯ 22 ವರ್ಷದ ನಾದಿಯಾ ಫೆರೆರಾ ಮೊದಲ ರನ್ನರ್ ಅಪ್ ಹಾಗೂ ದಕ್ಷಿಣ ಆಫ್ರಿಕಾದ 24 ವರ್ಷದ ಲಲೇಲಾ ಸ್ವಾನ್ ಎರಡನೇ ರನ್ನರ್ ಅಪ್ ಸ್ಥಾನ ಪಡೆದರು.

ಕೆಂಪು ಸಮುದ್ರ ತೀರದಲ್ಲಿರುವ ಈಲಟ್ ನಗರದ ಐಷಾರಾಮಿ ರೆಸಾರ್ಟ್ ನಲ್ಲಿ ಭುವನ ಸುಂದರಿ ಸ್ಪರ್ಧೆಯ 70ನೇ ಆವೃತ್ತಿಯ ಕಾರ್ಯಕ್ರಮ ನಡೆಯಿತು. ಚಂಡೀಗಢ ಮೂಲದ, 21ರ ಹರೆಯದ ಹರ್ನಾಜ್ ಕೌರ್ ಅವರು ಅಂತಿಮ ಸುತ್ತಿನಲ್ಲಿ 'ಭುವನ ಸುಂದರಿ' ಪಟ್ಟವನ್ನು ತಮ್ಮದಾಗಿಸಿಕೊಂಡರು.

ಹಿಂದಿನ ವರ್ಷ ಇದೇ ಗೌರವಕ್ಕೆ ಪಾತ್ರರಾಗಿದ್ದ, ಮೆಕ್ಸಿಕೊದ ಆಂಡ್ರಿಯಾ ಮೆಜಾ ಅವರು ಹರ್ನಾಜ್ ಅವರಿಗೆ ಕಿರೀಟ ತೊಡಿಸಿದರು. ಈಲಟ್‌ನಲ್ಲಿ ನೆಲೆಸಿರುವ ಭಾರತೀಯರು ಸೇರಿದಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಇತರರು ಹರ್ನಾಜ್ ಅವರ ಸಾಧನೆಯ ಅಮೂಲ್ಯ ಕ್ಷಣಗಳಿಗೆ ಸಾಕ್ಷಿಯಾದರು.

ಹರ್ನಾಜ್ ಕೌರ್ ಅವರು ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದಾರೆ.

## ಕರ್ನಾಟಕದಲ್ಲಿ ಮತಾಂತರ ನಿಷೇಧ: ಶಾಸನ ಜಾರಿಗೆ ಯತ್ನ

ಮತಾಂತರ ನಿಷೇಧ ಕಾಯ್ದೆ ಜಾರಿಗೆ ಬಂದರೆ ಕ್ರೈಸ್ತರು ಆತಂಕ ಪಡುವ ಅಗತ್ಯವಿಲ್ಲ. ಅವರ ಧಾರ್ಮಿಕ ಆಚರಣೆಗೆ ಯಾವುದೇ ಕುತ್ತು ಬರುವುದಿಲ್ಲ' ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಆ ಮೂಲಕ ಬೆಳಗಾವಿ ಅಧಿವೇಶನದಲ್ಲಿಯೇ ಮತಾಂತರ ನಿಷೇಧ ಮಸೂದೆ ಮಂಡನೆ ಮಾಡುವ ಸುಳಿವು ನೀಡಿದರು.

ಬಡತನ, ಮನೆಯ ಪರಿಸ್ಥಿತಿ ದುರುಪಯೋಗಪಡಿಸಿಕೊಂಡು ಹಾಗೂ ಆಮಿಷ ಒಡ್ಡಿ ಮತಾಂತರಕ್ಕೆ ಯತ್ನಿಸುವವರಿಗೆ ಕಡಿವಾಣ ಹಾಕಲು ಕಾಯ್ದೆ ಅನುಕೂಲವಾಗಲಿದೆ. ಸ್ವಾತಂತ್ರ್ಯಾ ನಂತರ ಈ ಬಗ್ಗೆ ಅನೇಕ ಬಾರಿ ಚರ್ಚೆಗ ಳಾಗಿವೆ. ಹಲವು ರಾಜ್ಯಗಳಲ್ಲಿ ಜಾರಿಗೆ ಬಂದಿದೆ. ಮತಾಂತರ ನಿಷೇಧ ಕಾಯ್ದೆ ಜಾರಿಯಾಗಬೇಕು ಎಂಬುದು ಬಹಳಷ್ಟು ಜನರ ಒತ್ತಾಸೆಯಾಗಿದೆ' ಎಂದರು.

ಕಾಯ್ದೆ ಬಗ್ಗೆ ಕಾನೂನು ಇಲಾಖೆ ಕರಡು ಸಿದ್ಧಪಡಿಸುತ್ತಿದ್ದು, ಬೆಳಗಾವಿ ಅಧಿವೇಶನದಲ್ಲಿ ಈ ಮಸೂದೆಯ ಕುರಿತು ಚರ್ಚೆಯಾಗಲಿದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಹೀಗೆ ಎಲ್ಲವೂ ಸಂವಿಧಾನದಲ್ಲಿ ಗುರುತಿಸಲಾದ ಧರ್ಮಗಳಾಗಿವೆ. ಯಾರ ಪ್ರಾರ್ಥನೆ, ಆಚರಣೆ, ಧಾರ್ಮಿಕ ಭಾವನೆಗಳಿಗೂ ಧಕ್ಕೆ ತರದ ಹಾಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದರು.


'ಮತಾಂತರ ಸಮಾಜಕ್ಕೆ ಒಳ್ಳೆಯ ದಲ್ಲ. ಯಾವುದೇ ಮನೆಗೆ, ಮನಸ್ಸು ಗಳಿಗೆ ಕೆಟ್ಟದಾಗಬಾರದು. ಬಡವರು, ದೀನದಲಿತರು ಇದಕ್ಕೆ ಬಲಿಯಾಗಬಾರದು ಎನ್ನುವ ಕಾರಣಕ್ಕೆ ಕಾನೂನು ಜಾರಿಗೆ ತರುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ'

## ಗರಿಷ್ಠ ಮಟ್ಟಕ್ಕೆ ಸಗಟು ಹಣದುಬ್ಬರ

ಸಗಟು ಬೆಲೆ ಆಧಾರಿತ ಹಣದುಬ್ಬರ ದರವು ನವೆಂಬರ್ ತಿಂಗಳಿನಲ್ಲಿ ಶೇಕಡ 14.23ಕ್ಕೆ ತಲುಪಿದೆ. ಇದು 12 ವರ್ಷಗಳ ಗರಿಷ್ಠ ಮಟ್ಟ. ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲದ ಬೆಲೆ ಹೆಚ್ಚಳವು ಇದಕ್ಕೆ ಮುಖ್ಯ ಕಾರಣ.

ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಿಂದಲೂ ಎರಡು ಅಂಕಿಗಳ ಮಟ್ಟದಲ್ಲಿಯೇ ಉಳಿದಿದೆ. ಸಗಟು ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 12.54ರಷ್ಟು, ಹಿಂದಿನ ವರ್ಷದ ನವೆಂಬರ್‌ನಲ್ಲಿ ಶೇ 2.29ರಷ್ಟು ಇತ್ತು.

'ರಾಸಾಯನಿಕಗಳು ಮತ್ತು ರಾಸಾಯನಿಕ ಉತ್ಪನ್ನಗಳು, ಆಹಾರ ವಸ್ತುಗಳ ಬೆಲೆ ಏರಿಕೆ ಕೂಡ ನವೆಂಬರ್‌ನಲ್ಲಿ ಹಣದುಬ್ಬರ ಮಟ್ಟ ಹೆಚ್ಚಾಗಲು ಕಾರಣ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.



## ವೇದ ಘೋಷ ಮಧ್ಯೆ ಕಾಶಿ ಧಾಮಕ್ಕೆ ಮೋದಿ ಚಾಲನೆ



ವಾರಾಣಸಿ(ಉ.ಪ್ರ): 5 ಲಕ್ಷ ಚದರ ಅಡಿ ವ್ಯಾಪ್ತಿಯಲ್ಲಿರುವ ಕಾಶಿ ವಿಶ್ವನಾಥ ಧಾಮ ಯೋಜನೆಯ (ಕಾರಿಡಾರ್) ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ವೇದಘೋಷಗಳ ಮಧ್ಯೆ ಸೋಮವಾರ ಉದ್ಘಾಟಿಸಿದರು. ಪಟ್ಟಣದ ಪ್ರಾಚೀನ ಭವ್ಯತೆಯನ್ನು ಅವರು ನೆನಪಿಸಿಕೊಂಡರು. ದೇಶದ ಪ್ರಾಚೀನ ಭವ್ಯತೆಯನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ನವೀಕೃತ ದೇವಾಲಯವು ಭಕ್ತರಿಗೆ ನೀಡುತ್ತದೆ ಎಂದು ಹೇಳಿದರು.

## ರಾಜೇಶ್ವರಿ ತೇಜಸ್ವಿ ನಿಧನ



ಸಾಹಿತಿ ದಿವಂಗತ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಪತ್ನಿ ರಾಜೇಶ್ವರಿ ತೇಜಸ್ವಿ (84) ಅವರು ಅಲ್ಪಕಾಲದ ಅನಾರೋಗ್ಯದಿಂದ ನಗರದ ರಾಜಲಕ್ಷ್ಮೀ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಪುತ್ರಿ ಸುಸ್ಮಿತಾ ಅವರ ನಿವಾಸದಲ್ಲಿ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಬಳಿಕ ರಾಜೇಶ್ವರಿ ಅವರ ಇಚ್ಛೆಯಂತೆ ಬೌರಿಂಗ್ ಆಸ್ಪತ್ರೆಗೆ ದೇಹದಾನ ಮಾಡಲಾಯಿತು. ರಾಜೇಶ್ವರಿಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದಲ್ಲಿ ಆನರ್ಸ್ ಮತ್ತು ಎಂ.ಎ. ಓದಿದವರು. ತೇಜಸ್ವಿ ಅವರನ್ನು ಪ್ರೀತಿಸಿ ವಿವಾಹವಾಗಿದ್ದ ಅವರು, ತಮ್ಮ ಬರಹಗಳ ಮೂಲಕ ಗುರುತಿಸಿಕೊಂಡಿದ್ದರು. 'ನನ್ನ ತೇಜಸ್ವಿ', 'ನಮ್ಮ ಮನೆಗೂ ಗಾಂಧಿ ಬಂದರು' ಅವರ ಕೃತಿಗಳು. ತೇಜಸ್ವಿ ನಿಧನದ ಬಳಿಕವೂ ಅವರು ಮೂಡಿಗೆರೆಯ ಮನೆಯಲ್ಲೇ ನೆಲೆಸಿದ್ದರು. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಸದಸ್ಯರಾಗಿ, ತೇಜಸ್ವಿ ಬದುಕಿನ ದಾಖಲೆಗಳನ್ನು ಕಾಪಾಡಿಕೊಂಡು ಒಂದು ಮ್ಯೂಸಿಯಂ ಸ್ಥಾಪಿಸುವ ಸಿದ್ಧತೆಯಲ್ಲಿದ್ದರು.

## ಅವಿಭಕ್ತ ಕುಟುಂಬ ನಿರ್ವಾಹಕನಿಗೆ ಆಸ್ತಿ ಮಾರಾಟದ ಹಕ್ಕಿದೆ: ಸುಪ್ರೀಂ

ಹಿಂದೂ ಅವಿಭಕ್ತ ಕುಟುಂಬದ ನಿರ್ವಹಣೆಯ ಹೊಣೆ ಹೊತ್ತಿರುವ ವ್ಯಕ್ತಿಯು ಕುಟುಂಬದ ಆಸ್ತಿ ಯನ್ನು ಮಾರಾಟ ಮಾಡಲು ಕರಾರು ಮಾಡಿಕೊಳ್ಳುವುದಕ್ಕೆ ಕುಟುಂಬದ ಇತರರು (ಕುಟುಂಬದ ಆಸ್ತಿಯಲ್ಲಿ ಸಮಪಾಲು ಹೊಂದಿರುವ ಇತರರು) ತಡೆ ಒಡ್ಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಹಿಂದೂ ಅವಿಭಕ್ತ ಕುಟುಂಬದ ನಿರ್ವಹಣೆ ಮಾಡುವ ವಯಸ್ಕ ವ್ಯಕ್ತಿಯು ಕುಟುಂಬದ ಆಸ್ತಿಯ ನಿರ್ವಹಣೆಯ ಹಕ್ಕು ಹೊಂದಿದ್ದಾರೆ ಎಂಬುದನ್ನು ಈ ಹಿಂದೆಯೂ ಹಲವು ಬಾರಿ ಹೇಳಲಾಗಿದೆ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಂಜೀವ್ ಕುಮಾರ್ ಅವರ ಪೀಠವು ಹೇಳಿದೆ.

ಕುಟುಂಬದ ಆಸ್ತಿಯನ್ನು ಮಾರಾಟ ಮಾಡುವ ಕರಾರು ಮಾಡಿಕೊಳ್ಳಲು ಕುಟುಂಬದ ನಿರ್ವಾಹಕರಿಗೆ ಹಕ್ಕು ಇದೆ ಎಂಬುದು ಹಿಂದೆಯೇ ಸಾಬೀತಾಗಿದೆ. ಈ ವಿಚಾರದಲ್ಲಿ ಮತ್ತೆ ತಕರಾರಿಗೆ ಅವಕಾಶ ಇಲ್ಲ. ಆದರೆ, ಮಾರಾಟದ ನಂತರ, ಮಾರಾಟವು ಕಾನೂನುಬದ್ಧ ಅಗತ್ಯಕ್ಕಾಗಿ ನಡೆದಿಲ್ಲ ಅಥವಾ ಕುಟುಂಬದ ಹಿತಕ್ಕಾಗಿ ನಡೆದಿಲ್ಲದಿದ್ದರೆ ಅದನ್ನು ಪ್ರಶ್ನಿಸುವುದಕ್ಕೆ ಅವಕಾಶ ಇದೆ ಎಂದು ಪೀಠವು ಹೇಳಿದೆ.

ಕಾನೂನುಬದ್ಧ ಕಾರಣಕ್ಕೆ ಅಥವಾ ಇಡೀ ಕುಟುಂಬದ ಹಿತದ ಕಾರಣಕ್ಕೆ ಕೈಗೊಳ್ಳುವ ನಿರ್ಧಾರವು ಕುಟುಂಬದಲ್ಲಿ ಇರುವ ಅಪ್ರಾಪ್ತ ವಯಸ್ಸಿನವರು ಮತ್ತು ವಿಧವೆಯವರು ಸೇ-ರಿದಂತೆ ಅವಿಭಜಿತ ಕುಟುಂಬದ ಎಲ್ಲರ ಹಿತಾಸಕ್ತಿಯನ್ನೂ ಒಳಗೊಂಡಿರುತ್ತದೆ ಎಂದು ಪೀಠ ಹೇಳಿದೆ.

'ಕಾನೂನುಬದ್ಧ ಅಗತ್ಯ ಎಂಬುದನ್ನು ಸ್ಥಾಪಿಸಲು ನಿರ್ದಿಷ್ಟ ನೆಲೆಗಳೇನೂ ಇಲ್ಲ. ಕಾನೂನುಬದ್ಧ ಅಗತ್ಯ ಎಂಬುದು ಆಯಾ ಪ್ರಕರಣದ ಸತ್ಯಾಂಶಗಳ ಮೇಲೆ ಅವಲಂಬಿಸಿರುತ್ತದೆ. ಕಾನೂನುಬದ್ಧ ಅಗತ್ಯವೇ ಎಂಬುದನ್ನು ನಿರ್ಧರಿಸು ವಲ್ಲಿ ಮತ್ತು ಅದನ್ನು ಹೇಗೆ ಈಡೇರಿಸ ಬೇಕು ಎಂಬುದರಲ್ಲಿ ಕುಟುಂಬದ ನಿರ್ವಾಹಕನಿಗೆ ವ್ಯಾಪಕವಾದ ವಿವೇಚನಾಧಿಕಾರ ಇರುತ್ತದೆ. ಕಾನೂನುಬದ್ಧ ಅಗತ್ಯ ಅಥವಾ ಇಡೀ ಪರಿವಾರದ ಹಿತಕ್ಕಾಗಿ ನಿರ್ಧಾರ ಕೈಗೊಳ್ಳುವ ನಿರ್ವಾಹಕರ ಅಧಿಕಾರವು ಸಿಂಧುವಾದುದು ಮತ್ತು ಇತರ ಪಾಲುದಾರರು ಈ ಅಧಿಕಾರಕ್ಕೆ ಬದ್ಧರಾಗಿರಬೇಕು' ಎಂದು ಪೀಠವು ವಿವರಿಸಿದೆ.

**ಮಗನಿಗೆ ಪ್ರಶ್ನಿಸುವ ಹಕ್ಕಿಲ್ಲ:**

ಹಿರಿಯೂರು ತಾಲ್ಲೂಕಿನ ಬಗ್ಗನಾಡು ಕಾವಲ್ ಗ್ರಾಮದಲ್ಲಿದ್ದ ಕೃಷಿ ಜಮೀನನ್ನು ಮಾರಾಟ ಮಾಡಲು ಅವಿಭಕ್ತ ಕುಟುಂಬದ ನಿರ್ವಾಹಕ ಕೆ. ವೇಲುಸ್ವಾಮಿ ಅವರು ಬೀರೆಡ್ಡಿ ದಶರಥರಾಮಿ ರೆಡ್ಡಿ ಅವರ ಜತೆ 2006ರ ಡಿಸೆಂಬರ್ 8ರಂದು ಕರಾರು ಮಾಡಿಕೊಂಡಿದ್ದರು. ₹29 ಲಕ್ಷಕ್ಕೆ ಜಮೀನು ಮಾರಲು ಒಪ್ಪಂದ ಆಗಿತ್ತು. ₹4 ಲಕ್ಷ ಮುಂಗಡವನ್ನೂ ವೇಲುಸ್ವಾಮಿ ಪಡೆದು ಕೊಂಡಿದ್ದರು.

ವೇಲುಸ್ವಾಮಿ ಅವರ ಮಗ ಮಂಜುನಾಥ್ ಅವರು ಮಾರಾಟ ಕರಾರಿನ ವಿರುದ್ಧ ನ್ಯಾಯಾಲಯಕ್ಕೆ ಹೋಗಿದ್ದರು. ಮಾರಾಟಕ್ಕೆ ತಮ್ಮ ಒಪ್ಪಿಗೆ ಅಗತ್ಯ ಎಂದು ಅವರು ವಾದಿಸಿದ್ದರು. ಅವಿಭಕ್ತ ಕುಟುಂಬದ ನಿರ್ವಾಹಕರಾಗಿರುವ ವೇಲುಸ್ವಾಮಿಗೆ ಮಾರಾಟದ ಹಕ್ಕು ಇದೆ ಎಂದು ಸ್ಥಳೀಯ ನ್ಯಾಯಾಲಯ ಹೇಳಿತ್ತು. ಅದರ ವಿರುದ್ಧ ಮಂಜುನಾಥ್ ಅವರು ಕರ್ನಾಟಕ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವೇಲುಸ್ವಾಮಿ ಮಾಡಿಕೊಂಡಿರುವ ಕರಾರು ಜಾರಿ ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಆದರೆ, ಕುಟುಂಬದ ನಿರ್ವಾಹಕರಾಗಿರುವ ವೇಲುಸ್ವಾಮಿಗೆ ಜಮೀನು ಮಾರಲು ಹಕ್ಕು ಇದೆ ಎಂದು ಸುಪ್ರೀಂ ಕೋರ್ಟ್ ಈಗ ಹೇಳಿದೆ.

## ಕಪ್ಪೆ ಹಬ್ಬ

ಅಳಿವಿನಂಚಿನಲ್ಲಿರುವ ಪಶ್ಚಿಮಘಟ್ಟದ ಕಪ್ಪೆ ಪ್ರಭೇದಗಳ ಉಳಿವಿಗೆ ಜಾಗೃತಿ ಮೂಡಿಸಲು ಅರಣ್ಯ ಇಲಾಖೆಯು ಸಾಗರ ತಾಲ್ಲೂಕಿನ ಮುಪ್ಪಾನೆಯಲ್ಲಿ ಡಿ. 18 ಹಾಗೂ 19ರಂದು 'ಕಪ್ಪೆ ಹಬ್ಬ' ಆಯೋಜಿಸಿದೆ.

## 1.8 ಕೋಟಿ ಬ್ಯಾರಲ್ ತೈಲ ಮಾರುಕಟ್ಟೆಗೆ: ಅಮೆರಿಕ


ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯನ್ನು ತಗ್ಗಿಸುವ ಯೋಜನೆಯ ಭಾಗವಾಗಿ 1.8 ಕೋಟಿ ಬ್ಯಾರಲ್‌ಗಳಷ್ಟು ಕಚ್ಚಾ ತೈಲವನ್ನು ಡಿಸೆಂಬರ್ 17ರಂದು ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ಅಮೆರಿಕದ ಇಂಧನ ಇಲಾಖೆಯು ಹೇಳಿದೆ.

5 ಕೋಟಿ ಬ್ಯಾರಲ್ ಕಚ್ಚಾತೈಲವನ್ನು ತನ್ನ ಸಂಗ್ರಹಾಗಾರಗಳಿಂದ ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ಅಮೆರಿಕವು ನವೆಂಬರ್‌ನಲ್ಲಿ ಘೋಷಿಸಿತ್ತು. ಮೊದಲ ಹಂತದಲ್ಲಿ 1.8 ಕೋಟಿ ಬ್ಯಾರಲ್ ಕಚ್ಚಾ ತೈಲ ಬಿಡುಗಡೆ ಮಾಡಲಿದ್ದು, ಮುಂಬರುವ ತಿಂಗಳುಗಳಲ್ಲಿ ಇನ್ನುಳಿದ ಪ್ರಮಾಣವನ್ನೂ ಬಿಡುಗಡೆ ಮಾಡಲಾಗುವುದು ಎಂದು ಅದು ತಿಳಿಸಿದೆ.

ಅಮೆರಿಕದ ಮನವಿಯಂತೆ, ಭಾರತ, ಚೀನಾ ಮತ್ತು ದಕ್ಷಿಣ ಕೊರಿಯಾ ದೇಶಗಳು ಸಹ ತಮ್ಮ ತೈಲ ಸಂಗ್ರಹಾಗಾರಗಳಲ್ಲಿ ಇರುವ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿವೆ.

ಮಾರುಕಟ್ಟೆಯ ಅಸಮತೋಲನ ನಿವಾರಿಸಲು ಮತ್ತು ಗ್ರಾಹಕರ ವೆಚ್ಚವನ್ನು ಕಡಿಮೆ ಮಾಡಲು ಸಂಗ್ರಹಾಗಾರದ ತೈಲ ಬಳಕೆ ಬಳಕೆ ಮಾಡಲು ಅಧ್ಯಕ್ಷ ಜೋ ಬೈಡನ್ ಅವರು ಒಪ್ಪಿಗೆ ನೀಡಿದ್ದಾರೆ ಎಂದು ಇಂಧನ ಕಾರ್ಯದರ್ಶಿ ಜೆನ್ನಿಫರ್ ಗ್ರಾನ್ಹೋಮ್ ತಿಳಿಸಿದ್ದಾರೆ.

## ವಿಶ್ವ ಚೆಸ್: ಕಾರ್ಲ್‌ಸನ್ ಚಾಂಪಿಯನ್




ನಾರ್ವೆಯ ಗ್ರ್ಯಾಂಡ್ ಮಾಸ್ಟರ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಾರೆ.

ಕಾರ್ಲ್‌ಸನ್ ರಷ್ಯಾದ ಇಯಾನ್ ಇಯಾನ್ ನಿಪೋಮ್‌ನಿಶಿ ಸವಾಲು ಮೀರಿದರು. 14 ಗೇಮ್‌ಗಳ ಪಂದ್ಯದ 11ನೇ ಗೇಮ್‌ನಲ್ಲಿ ಕಾರ್ಲ್‌ಸನ್ ಜಯ ಸಾಧಿಸಿದರು. ಇದು ಅವರಿಗೆ 4ನೇ ಜಯವಾಗಿತ್ತು. ಈ ಗೇಮ್‌ನಲ್ಲಿ ಅವರು ಕಪ್ಪು ಕಾಯಿಗಳೊಂದಿಗೆ ಆಡಿದ್ದರು.

ಪಂದ್ಯದಲ್ಲಿ ಕಾರ್ಲ್‌ಸನ್ 7.5 ಪಾಯಿಂಟ್ಸ್ ಗಳಿಸಿದರೆ ನಿಪೋಮ್‌ನಿಶಿ ಅವರಿಗೆ 3.5 ಪಾಯಿಂಟ್ಸ್ ಕಲೆಹಾ ಕಲಷ್ಟೇ ಸಾಧ್ಯವಾಯಿತು. 31 ವರ್ಷದ ನಾರ್ವೆ ಆಟಗಾರನಿಗೆ ಇದು ಸತತ ಐದನೇ ಪ್ರಶಸ್ತಿ.


## ರಾಯಲ್ ಗೋಲ್ಡ್ ಮೆಡಲ್' ಪುರಸ್ಕಾರಕ್ಕೆ ' ವಿನ್ಯಾಸಕ ಬಾಲಕೃಷ್ಣ ದೋಶಿ ಆಯ್ಕೆ



ವಾಸ್ತು ವಿನ್ಯಾಸಕ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ದೇಶದ ಪ್ರಸಿದ್ಧ ವಾಸ್ತು ವಿನ್ಯಾಸಕ ಬಾಲಕೃಷ್ಣ ದೋಶಿ ಅವರು ಬ್ರಿಟನ್‌ನ ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಟಿಷ್ (ಆರ್‌ಐಬಿಎ) ನೀಡುವ ಪ್ರತಿಷ್ಠಿತ 'ರಾಯಲ್ ಗೋಲ್ಡ್ ಮೆಡಲ್–2022' ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ವಾಸ್ತುಶಿಲ್ಪ ಕ್ಷೇತ್ರದಲ್ಲಿ ನೀಡಲಾಗುವ ವಿಶ್ವದ ಅತ್ಯುನ್ನತ ಗೌರವ ಇದಾಗಿದೆ.


94 ವರ್ಷದ ಬಾಲಕೃಷ್ಣ ದೋಶಿ ಅವರು 70 ವರ್ಷಗಳ ವೃತ್ತಿಜೀವನದಲ್ಲಿ 100ಕ್ಕೂ ಹೆಚ್ಚು ಯೋಜನೆಗಳಿಗೆ ವಾಸ್ತು ರಚನೆ ಮಾಡಿದ್ದಾರೆ. ವೃತ್ತಿಪರ ಕೆಲಸದ ಜತೆಗೆ ಅವರು ಭಾರತ ಸೇರಿದಂತೆ ನೆರೆಯ ದೇಶಗಳಲ್ಲಿ ಬೋಧನಾ ಕಾರ್ಯದಲ್ಲೂ ತೊಡಗಿದ್ದಾರೆ. ಈ ಮೂಲಕ ಅವರು ವಾಸ್ತು ವಿನ್ಯಾಸ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದ್ದಾರೆ ಎಂದು ಆರ್‌ಐಬಿಎ ಪ್ರಕಟಣೆಯಲ್ಲಿ ತಿಳಿಸಿದೆ.

'ರಾಯಲ್ ಗೋಲ್ಡ್ ಮೆಡಲ್' ಅನ್ನು ವಾಸ್ತು ವಿನ್ಯಾಸ ಕ್ಷೇತ್ರದ ಪ್ರಗತಿ ಮತ್ತು ಅದರ ಮೇಲೆ ಮಹತ್ವದ ಪ್ರಭಾವ ಬೀರಿದ ವ್ಯಕ್ತಿ ಅಥವಾ ಜನರ ಗುಂಪಿಗೆ ನೀಡಲಾಗುತ್ತದೆ. ಈ ಕ್ಷೇತ್ರದಲ್ಲಿ ದೋಶಿ ಅವರ ಜೀವಮಾನ ಶ್ರೇಷ್ಠ ಸಾಧನೆಯನ್ನು ಗುರುತಿಸಿ ರಾಣಿ ಎಲಿಜಬೆತ್–2 ಅವರು ಅನುಮೋದನೆ ನೀಡಿದ್ದಾರೆ.










» **Download Sadhana App**

» **Free Test Series**

» **Free Current Affairs**

» **Free Videos**

» **You Can Buy Books**

» **400+ Competetive Books Available**



» ಐ ಫೋನ್ ಮತ್ತು ಲ್ಯಾಪ್‌ಟಾಪ್/ಡೆಸ್ಕ್‌ಟಾಪ್ ಬಳಕೆದಾರರು **www.sadhanamart.com** ನಲ್ಲಿ ಈ ಸೌಲಭ್ಯ ಪಡೆಯಬಹುದು

ಕೃಪೆ: ಕನ್ನಡ ಮತ್ತು ಇಂಗ್ಲಿಷ್ ದಿನ ಪತ್ರಿಕೆಗಳು

# ಸಾಧನಾ ಅಕಾಡೆಮಿ

## INFOGRAPHICS

# ಪ್ರಚಲಿತ ಘಟನೆಗಳು

# ಡಿಸೆಂಬರ್-2021













SADHANA ACADEMY